2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**115/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕಾವ್ಯಶ್ರೀ | ಪಿಡಬ್ಲ್ಯೂ - 1 |
| ಗಂಡನ ಹೆಸರು | - | ಸುಪ್ರೀತ್ ಪ್ರವೀಣ್ ಕುಮಾರ್ | ಸಿಡಬ್ಲ್ಯೂ - 1 |
| ವಯಸ್ಸು | - | 33 ವರ್ಷ | |
| ಉದ್ಯೋಗ | - | ಮನೆಕೆಲಸ | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 21-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು. 1 ನೇ ಆರೋಪಿ ಸುಪ್ರೀತ್ ಪ್ರವೀಣ್ ಕುಮಾರ್ ನನಗೆ ಗಂಡನಾಗಬೇಕು. 2 ನೇ ಆರೋಪಿ ಗೀತಾ ನನ್ನ ಅತ್ತೆ, 3 ನೇ ಆರೋಪಿ ಹುಚ್ಚೇಗೌಡ ನನ್ನ ಮಾವ, 4 ನೇ ಆರೋಪಿ ಶೀಲಾ ನನ್ನ ಗಂಡನ ಅಕ್ಕ ಇರುತ್ತಾರೆ. ನನ್ನ ಮತ್ತು 1 ನೇ ಆರೋಪಿಯ ಮದುವೆಯಾಗಿ ಇವತ್ತಿಗೆ ಸುಮಾರು 6 ವರ್ಷಗಳು ಆಗಿರುತ್ತದೆ. ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ನನ್ನ ಅತ್ತೆ ಮಾವ ಇವರ ಜೊತೆ ವಾಸಿಸಲು ಆರಂಭಿಸಿದೆನು. 2014 ರಲ್ಲಿ 1 ನೇ ಆರೋಪಿಯು ಕಂಪನಿ ವತಿಯಿಂದ London ಗೆ project ಕೆಲಸಕ್ಕೆ ಹೋಗಿದ್ದರು. ನನ್ನ ಗಂಡ London ಗೆ ಹೋದ್ದಾಗ ನನ್ನ ಅತ್ತೆ ಮಾವನ ಮನೆಯಲ್ಲಿ ಇದ್ದೆನು. 1 ನೇ ಆರೋಪಿಯ ಬೆಂಗಳೂರಿನ Infosys ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ನಾನು

ಬೆಂಗಳೂರಿನಲ್ಲಿ ನನ್ನ ಗಂಡನ ಜೊತೆಯಲ್ಲಿ ಸುಮಾರು 6 ತಿಂಗಳ ಕಾಲ ಇದ್ದೆನು. ನಾನು ಬೆಂಗಳೂರಿನಲ್ಲಿ 1 ನೇ ಆರೋಪಿ ಮನೆಯಲ್ಲಿ ಇರುವಾಗ ನನಗೆ 1 ನೇ ಆರೋಪಿ ವರದಕ್ಷಿಣೆ ಹಣ ತರಲಿಲ್ಲ ಎನ್ನುವ ವಿಚಾರಕ್ಕಾಗಿ ನನಗೆ ಮಾನಸಿಕವಾಗಿ ಹಿಂಸೆ ಕೊಡುವುದು ಮತ್ತು ಹೊಡೆಯುವುದು ಬಡೆಯುವುದು ಮಾಡುತ್ತಿದ್ದನು.

2. ದಿಃ 07.05.2017 ರಂದು 1 ನೇ ಆರೋಪಿಯು ನನ್ನ ಕುತ್ತಿಗೆಯನ್ನು ತನ್ನ ಕೈಯಿಂದ ಬಲವಾಗಿ ಹಿಸುಕಿ ಸಾಯಿಸಲು ಪ್ರಯತ್ನ ಪಟ್ಟಿದ್ದು, ನನ್ನ ಕುತ್ತಿಗೆಗೆ ರಕ್ತ ಗಾಯವಾಗಿರುತ್ತದೆ. ನಂತರ ನಾನು ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳ ಮೇಲೆ ದೂರನ್ನು ಬೆಂಗಳೂರಿನ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿರುತ್ತೇನೆ. ನಂತರ ನಮ್ಮ ತಂದೆ ಮತ್ತು ಪೊಲೀಸರು ಸೇರಿ ನನ್ನ ಮತ್ತು ಆರೋಪಿಗಳ ನಡುವೆ ರಾಜಿ ಸಂದಾನ ಮಾಡಿಸಿದ ನಂತರ ನಾನು ಮತ್ತೆ ಆರೋಪಿಗಳ ಚಿಕ್ಕಮಗಳೂರಿನ ಲಕ್ಷ್ಮೀಶನಗರದಲ್ಲಿ ಇರುವ ಮನೆಗೆ ಹೋಗಿ ವಾಸಲು ಆರಂಭಿಸಿದೆನು. ನಂತರ ನಾನು ಚಿಕ್ಕಮಗಳೂರು ಕಾಲೇಜಿನ ಎಂ.ಇ.ಎಸ್. ಕಾಲೇಜಿನಲ್ಲಿ ಅತಥಿ ಉಪನ್ಯಾಸಕಿ ಎಂದು ಕೆಲಸಕ್ಕೆ ಸೇರಿದ್ದು, ಆರೋಪಿಗಳ ಮನೆಯಿಂದಲೇ ಓಡಾಡುತ್ತಿದ್ದೆನು. ನಂತರ ಚಿಕ್ಕಮಗಳೂರಿನ ಆರೋಪಿಗಳ ಮನೆಯಲ್ಲಿಯು ಸಹ ನನಗೆ ಆರೋಪಿಗಳು ವರದಕ್ಷಿಣೆ ಹಣ ತಂದಿಲ್ಲ ಎಂದು ಮಾನಸಿಕ ಹಿಂಸೆ, ಬೈಯುವುದು, ಹೊಡೆಯುವುದು ಮಾಡುತ್ತಿದ್ದರು. 4 ನೇ ಆರೋಪಿಯು ಫೋನ್ ಮುಖಾಂತರ 1 ರಿಂದ 3 ನೇ ಆರೋಪಿಗಳಿಗೆ ಚಾಡಿ ಮಾತು ಹೇಳಿ

ನನ್ನನ್ನು ಸಾಯಿಸಿಬಿಡಿ ನಂತರ ಪ್ರವೀಣನಿಗೆ ಇನ್ನೊಂದು ಮದುವೆ ಮಾಡಬಹುದು ಎಂದು ಹೇಳುತ್ತಿದ್ದಳು. ಆರೋಪಿಗಳು ನನ್ನನ್ನು ಕುರಿತು ವರದಕ್ಷಿಣೆ ತಂದಿಲ್ಲ ಎಂದು ಅವಚ್ಯಾ ಶಬ್ಧಗಳಿಂದ ಬೆವರ್ಸಿ ಮುಂಡೆ, ಹಲ್ಕಟ್ ಮುಂಡೆ ಎಂದು ಬೈಯುತ್ತಿದ್ದರು.

3. ದಿಃ 27.09.2017 ರಂದು ನಾನು ಮದ್ಯಾಹ್ನ ಊಟಕ್ಕೆ ಎಂದು ಮನೆಗೆ ಬಂದಾಗ ಆಗ ನಮ್ಮ ಅತ್ತೆ ಮಾವ ಅಂದರೆ 2 ಮತ್ತು 3 ನೇ ಆರೋಪಿಗಳು ಮನೆಗೆ ಪುಕ್ಕಸಟ್ಟೆ ಊಟ ಮಾಡಲು ಬರುತ್ತೀಯ ಬೇವರ್ಸಿ ಮುಂಡೆ ಎಂದು ಬೈದು, ನಮ್ಮ ಮಾವ ಮನೆಯ ಅಡುಗೆ ಮನೆಯ ಒಳಗಡೆ ಹೋಗಿ ಚಾಕುವನ್ನು ಗ್ಯಾಸ್ ಸ್ಟವ್ ಮೇಲೆ ಇಟ್ಟು ಬಿಸಿ ಮಾಡಿಕೊಂಡು ಬಂದರು, ಆಗ ನನ್ನ ಅತ್ತೆ ನನ್ನ ಎರಡು ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡರು ನಂತರ ನನ್ನ ಮಾವ ನನ್ನ ಎಡಕೈ ಗೆ ಬಿಸಿಯಾದ ಚಾಕುವಿನಿಂದ ಬರೆ ಹಾಕಿದರು ಮತ್ತು ಬಲಗಾಲಿಗೂ ಸಹ ಚಾಕುವಿನಿಂದ ಬರೆ ಹಾಕಿರುತ್ತಾರೆ. ನಂತರ ನಾನು ನೋವಿನಿಂದ ಜೊರಾಗಿ ಕೂಗಿಕೊಂಡೆನು. ನಂತರ ನಮ್ಮ ಅತ್ತೆ ತನ್ನ ಕೈಯಿಂದ ನನ್ನ ಬಾಯಿಯನ್ನು ವತ್ತಿ ಹಿಡಿದರು. ನಂತರ ನಮ್ಮ ಮಾವ Charger ನ ವೈರ್ ನು ತಂದು ನನ್ನ ಕೈ, ಮೈ ಮೇಲೆ ಎಲ್ಲಾ ಹೊಡೆದು ಮತ್ತು ಬೆನ್ನಿಗೆ ಕೈಗಳಿಂದ ಗುದ್ದಿ ಬೇವರ್ಸಿ ಮುಂಡೆ ಅಂತ ಬೈದರು. ನಂತರ ನನ್ನನ್ನು ಸಾಯಿಸಿಬಿಡುತ್ತೀನೆ ನೀನು ಸತ್ತರೆ ನನ್ನ ಮಗನಿಗೆ ಇನ್ನೊಂದು ಮದುವೆ ಮಾಡಬಹುದು ಎಂದು ಸದರಿ ವೈರ್ ನಿಂದ ನನ್ನ ಕುತ್ತಿಗೆಗೆ ಬಿಗಿದು ನನ್ನನ್ನು ಸಾಯಿಸಲು ಪ್ರಯತ್ನ ಪಟ್ಟರು. ನಂತರ ಆಗ ನಮ್ಮ ಮನೆಗೆ ಬಂದ ಸರೋಜ ಎಂಬುವವರು ಆರೋಪಿಗಳಿಂದ ನನ್ನನ್ನು ರಕ್ಷಿಸಿದರು. ನಂತರ ಸರೋಜ

ಎನ್ನುವವರು ನನ್ನನ್ನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ಹೆಚ್ಚಿನ ವರದಕ್ಷಿಣೆ ಹಣ ಮತ್ತು ಒಡವೆ ತರುವ ವಿಷಯವಾಗಿ ಆರೋಪಿಗಳು ನನಗೆ ಹಿಂಸೆ ಕಿರುಕುಳ ನೀಡುತ್ತಿದ್ದರು. ನನ್ನ ಮೇಲೆ ಆರೋಪಿಗಳು ಹಲ್ಲೆ ಮಾಡಿದ್ದರಿಂದ ಸುಸ್ತಾಗಿದ್ದು, ನಂತರ ಈ ವಿಷಯವಾಗಿ ನಾನು ಆರೋಪಿಗಳ ವಿರುದ್ಧ ದಿಃ 28.09.2017 ರಂದು ರಾತ್ರಿ ಸುಮಾರು 9.00 ಗಂಟೆಗೆ ಚಿಕ್ಕಮಗಳೂರಿನ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

4. ಆರೋಪಿಗಳು ನನ್ನನ್ನು ಸಾಯಿಸಿ 1 ನೇ ಆರೋಪಿಗೆ ಇನ್ನೊಂದು ಹೆಣ್ಣು ತಂದು ಮದುವೆ ಮಾಡಿಕೊಡುವ ಸಲುವಾಗಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ನಾನು ದೂರನ್ನು ನೀಡಿದ ಮಾರನೇ ದಿನ ಪೊಲೀಸರು ಸಂಜೆ 7.00 ಗಂಟೆಗೆ ಆರೋಪಿಗಳ ಮನೆಗೆ ಬಂದಿದ್ದರು. ಆಗ ಅಲ್ಲಿ ಆರೋಪಿಗಳು ಇರಲಿಲ್ಲ, ಮನೆಯನ್ನು ಬೀಗ ಹಾಕಿಕೊಂಡು ಹೋಗಿದ್ದರು. ಅದರಿಂದ ಆರೋಪಿಗಳ ಮನೆಯ ಗೇಟ್ ನ ಮುಂಬಾಗದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ಕೃತ್ಯ ಸ್ಥಳದ ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ಸಮಯದಲ್ಲಿ ಚಾಸಾ.2 ಮತ್ತು 3 ಇವರು ಪಂಚರಾಗಿ ಹಾಜರಿದ್ದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಮಹಜರ್

ಮಾಡುವ ಸಮಯದಲ್ಲಿ ಪೊಲೀಸರು ಪೋಟೋ ತೆಗೆದಿರುತ್ತಾರೆ. ಈಗ ತೋರಿಸುವ 2 ಪೋಟೋಗಳು ನಿ.ಪಿ.2 ಮಹಜರ್ ಕಾಲಕ್ಕೆ ತೆಗೆದ ಪೋಟೋಗಳು ಆಗಿರುತ್ತವೆ. ಸದರಿ ಪೋಟೋಗಳಲ್ಲಿ ಆರೋಪಿತರ ಮನೆಯ ಚಿತ್ರಣವನ್ನು ಕಾಣಬಹುದು. ಅವುಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ನಿ.ಪಿ.3 ಮತ್ತು 4 ಪೋಟೋಗಳಲ್ಲಿ ನನ್ನ ಮತ್ತು ಪಂಚರ ಇರುವಿಕೆ ಕಂಡು ಬರುತ್ತದೆ. ನಿ.ಪಿ.3 ಮತ್ತು 4 ರಲ್ಲಿ ಕಾಣಿಸುವ ಮನೆ ಮತ್ತು ಮನೆಯ ಗೇಟು ಆರೋಪಿಗಳಿಗೆ ಸಂಬಂಧಿಸಿದ್ದು ಆಗಿರುತ್ತದೆ.

5. ದಿಃ 05.10.2017 ರಂದು ನಾನು ನಮ್ಮ ಮದುವೆಯ ಪತ್ರಿಕೆ, Marriage certificate, ನನಗೆ ಗಾಯವಾದ ಬಗ್ಗೆ ತೆಗೆದ ಪೋಟೋಗಳು, ಮದುವೆ ಕಾಲದಲ್ಲಿ ತಾಳಿ ಕಟ್ಟುವ ಸಮಯದಲ್ಲಿ ತೆಗೆದ ಪೋಟೋ ಇವುಗಳನ್ನು ನಾನು ಚಿಕ್ಕಮಗಳೂರಿನ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿ ಕೊಟ್ಟಿರುತ್ತೇನೆ. ಅವುಗಳನ್ನು ಪೊಲೀಸರು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಅಮಾನತ್ತು ಮಹಜರ್ ನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ನಾನು ಹಾಜರು ಪಡಿಸಿದ ದಾಖಲಾತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಲಗ್ನ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು. Marriage certificate ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಮದುವೆ ಕಾಲಕ್ಕೆ ತೆಗೆದ

ಫೋಟೋವನ್ನು ನಿ.ಪಿ.8 ಎಂದು ಗುರುತಿಸಲಾಯಿತು. 3 ನೇ ಆರೋಪಿಯು Charger ನ ವೈರ್ ನಿಂದ ನನ್ನ ಕುತ್ತಿಗೆಗೆ ಬಿಗಿದಿದ್ದು ಅದರ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು. 3 ನೇ ಆರೋಪಿಯು ನನಗೆ ಬಿಸಿಯಾದ ಚಾಕುವಿನಿಂದ ಕೈ ಕಾಲಿಗೆ ಬರೆ ಹಾಕಿದ್ದು, ಅವುಗಳ ಫೋಟೋವನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.10 ಮತ್ತು 11 ಎಂದು ಗುರುತಿಸಲಾಯಿತು. ನಿ.ಪಿ.10 ಮತ್ತು 11 ಫೋಟೋಗಳಲ್ಲಿ ನನಗೆ ಗಾಯವಾದ ಚಿತ್ರಣ ಕಂಡು ಬರುತ್ತದೆ

6. ನಂತರ ಆರೋಪಿಗಳು ನ್ಯಾಯಾಲಯದ ಜಾಮೀನು ಪಡೆದು ಮನೆಗೆ ಹೋಗಿರುತ್ತಾರೆ, ನಂತರ ದಿಃ 22.10.2017 ರಂದು ಮಧ್ಯಾಹ್ನ 12.00 ಗಂಟೆಗೆ ನಾನು ಪೊಲೀಸರನ್ನು ಕರೆದುಕೊಂಡು ಕೃತ್ಯ ಸ್ಥಳವನ್ನು ತೋರಿಸಲು ಆರೋಪಿತರ ಮನೆಗೆ ಹೋಗಿರುತ್ತೇನೆ. ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಕೃತ್ಯ ಸ್ಥಳದ ಇನ್ನೊಂದು ಮಹಜರ್ ನ್ನು ಮಾಡಿರುತ್ತಾರೆ. ಸದರಿ ಮಹಜರ್ ನ್ನು ಆರೋಪಿಗಳ ಮನೆಯ ಟಿ.ವಿ ಹಾಲ್ ಮತ್ತು ಡೈನಿಂಗ್ ಟೇಬಲ್ ಹತ್ತಿರ ಮಾಡಿರುತ್ತಾರೆ. ನಂತರ ಆರೋಪಿಗಳ ಮನೆಯಲ್ಲಿ ನನಗೆ ಬರೆ ಹಾಕಿದ ಚಾಕು ಮತ್ತು ನನ್ನ ಕುತ್ತಿಗೆಗೆ ಬಿಗಿದ Charger ವೈರ್ ನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.12 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು. ನಿ.ಪಿ.12 ಮಹಜರ್ ಕಾಲಕ್ಕೆ ಪಂಚರಾಗಿ ಮರಿಗೌಡ ಮತ್ತು ಲಕ್ಷ್ಮಣಗೌಡ ಇದ್ದು

ಸದರಿ ಮಹಜರ್ ಗೆ ಸಹಿ ಮಾಡಿರುತ್ತಾರೆ. ನನ್ನ ಮೇಲೆ ವರದಕ್ಷಿಣೆ ಹಣ ತರಲಿಲ್ಲ ಎಂದು ಹಿಂಸೆ ಕಿರುಕುಳ ಕೊಟ್ಟು ಅವಾಚ್ಯ ಶಬ್ದಗಳಿಂದ ಬೈದು ಬಿಸಿಯಾದ ಚಾಕು ಮತ್ತು charger ವೈರ್ ನಿಂದ ಹಲ್ಲೆ ಮಾಡಿರುವ ಆರೋಪಿಗಳು ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳೇ ಆಗಿರುತ್ತಾರೆ.

7. ನಂತರ ನಾನು ಪೊಲೀಸರಿಗೆ ಮರು ಹೇಳಿಕೆಯನ್ನು ಸಹ ನೀಡಿರುತ್ತೇನೆ. ನನ್ನ ಮೇಲೆ ಹಲ್ಲೆಗೆ ಉಪಯೋಗಿಸಿದ್ದ ಚಾಕು ಮತ್ತು charger ವೈರ್ ನ್ನು ನೋಡಿದರೆ ಗುರುತಿಸುತ್ತೇನೆ.

(ಈಗ ಮೊಹರು ಮಾಡಲಾದ ಒಂದು ಬಿಳಿ ಬಟ್ಟೆಯ ಚೀಲ ಇದ್ದು ಅದನ್ನು ಸಾಕ್ಷಿ, ಆರೋಪಿ ಮತ್ತು ಉಬಯ ಪಕ್ಷದವರ ಸಮಕ್ಷಮ ತೆರೆಯಲಾಯಿತು).

8. ಸದರಿ ಬಿಳಿ ಬಟ್ಟೆಯ ಚೀಲದಲ್ಲಿ ಒಂದು charger ವೈರ್ ಇದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದರಿಂದಲೇ 3 ನೇ ಆರೋಪಿ ತನ್ನ ಕುತ್ತಿಗೆಗೆ ಬಿಗಿದಿದ್ದು ಎಂದು ಗುರುತಿಸಿರುತ್ತಾರೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ನಂತರ ಸದರಿ ಬಿಳಿ ಬಟ್ಟೆಯ ಚೀಲದಿಂದ ಒಂದು ಚಾಕುವನ್ನು ಹೊರ ತೆಗೆದಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದರಿಂದಲೇ 3 ನೇ ಆರೋಪಿ ತನ್ನ ಕೈ ಮತ್ತು ಕಾಲಿಗೆ ಬರೆ ಹಾಕಿರುತ್ತಾರೆ. ಸದರಿ ಚಾಕುವನ್ನು ಮು.ಮಾ.2 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ವಿ.ಟಿ.ಟಿ. ವಕೀಲರಿಂದ – ಆರೋಪಿತರ ಪರವಾಗಿ

9. ಈ ಹಂತದಲ್ಲಿ ಆರೋಪಿತರ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸಮಯ ಕೇಳಿದ್ದರಿಂದ ಸಮಯ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.

ದಿನಾಂಕಃ 03-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – ಆರೋಪಿತರ ಪರವಾಗಿ</u>

10. ನನಗಿಂತ ಮೊದಲು ನನ್ನ ಇಬ್ಬರು ತಂಗಿಯರ ಮದುವೆಯಾಗಿರುತ್ತದೆ. ಅವರಲ್ಲಿ ಒಬ್ಬ ನನ್ನ ತಂಗಿ ನಮ್ಮ ಮನೆಯ ಮೇಲ್ಭಾಗದಲ್ಲಿರುವ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಅವರು ಬಾಡಿಗೆಗೆ ಇರುತ್ತಾರೆ ಎಂದು ಹೇಳುತ್ತಾರೆ. ನನ್ನ ಇಬ್ಬರು ತಂಗಿಯರ ಮದುವೆಯಾದ ಮೂರು ತಿಂಗಳ ನಂತರ ನನ್ನ ಮದುವೆಯಾಗಿರುತ್ತದೆ. ನನ್ನ ಮದುವೆ ಕಾಲಕ್ಕೆ ನಾನು ಪಿ.ಹೆಚ್‌ಡಿ ಕೊನೆಯ ವರ್ಷದಲ್ಲಿ ಓದುತ್ತಿದ್ದೆನು. ನಾನು ನನ್ನ ಪಿ.ಹೆಚ್‌ಡಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ನರಸಿಂಹಮೂರ್ತಿ ಇವರ ಮಾರ್ಗದರ್ಶನದಲ್ಲಿ ಮಾಡುತ್ತಿದ್ದೆನು. ನಾನು ಪಿ.ಹೆಚ್‌ಡಿ ಮಾಡುವ ಕಾಲಕ್ಕೆ ಎಲ್ಲಿಯೂ ಕೆಲಸ ಮಾಡುತ್ತಿರಲಿಲ್ಲ.

11. ನನ್ನ ಮದುವೆಯ ಬಗ್ಗೆ ಮಾತುಕತೆಯಾಗಿ ಹದಿನೈದು ದಿನಗಳ ಒಳಗೆ ನನ್ನ ಮದುವೆಯಾಗಿರುತ್ತದೆ. ನನ್ನ ಮದುವೆ ಹಿರಿಯರ ಒಪ್ಪಿಗೆಯಿಂದ ಮತ್ತು ಶಾಸ್ತ್ರ ಸಂಪ್ರದಾಯ ಪ್ರಕಾರ ಆಗಿರುತ್ತದೆ. ನನ್ನ ಮದುವೆಯ ಲಗ್ನಪತ್ರಿಕೆಗಳನ್ನು ನನ್ನ ಗಂಡನ ಮನೆಯವರು ಮಾಡಿಸಿರುತ್ತಾರೆ ಎಂದರೆ ಕೇವಲ 5 ಲಗ್ನಪತ್ರಿಕೆಗಳನ್ನು ಮಾಡಿಸಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ಮನೆಯವರು ಆ 5 ಲಗ್ನಪತ್ರಿಕೆಗಳಷ್ಟು ಲಗ್ನಪತ್ರಿಕೆಗಳನ

ಮಾಡಿಸಿಲ್ಲ ಎಂದರೆ ಸರಿ. ನನ್ನ ತಂಗಿಯರ ಮದುವೆ ಬೀರೂರಿನಲ್ಲಿ ಆಗಿರುತ್ತದೆ ಮತ್ತು ಸದರಿ ಮದುವೆಗೆ ನಮ್ಮ ನೆಂಟರಿಷ್ಟರೆಲ್ಲರನ್ನು ಕರೆದಿದ್ದೇವು. ನನ್ನ ಮದುವೆಗೆ ಕೆಲವೇಕೆಲವು ಜನ ಬಂದಿದ್ದರು ಎಂದರೆ ಸರಿ. ನನ್ನ ಮದುವೆಯಾಗುವ ಪೂರ್ವದಲ್ಲಿ ನನ್ನ ವಾಸ ಬೀರೂರಿನಲ್ಲಿ ಇತ್ತು ಎಂದರೆ ಸರಿ. ನನ್ನ ಎಲ್ಲಾ ಸಂಬಂಧಿಕರು ಚಿಕ್ಕಮಗಳೂರಿನಲ್ಲೇ ಇರುತ್ತಾರೆ ಎಂದರೆ ಸಾಕ್ಷಿಯು ಬೇರೆ ಕಡೆಯೂ ಸಹ ಇರುತ್ತಾರ ಎಂದು ಹೇಳುತ್ತಾರೆ. ನಮಗೆ ಅತಿ ಹೆಚ್ಚಿನ ಸಂಬಂಧಿಕರು ಯಾವ ಊರಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

12. ನನ್ನ ಮದುವೆ ಆಗಿದ್ದು ಚಿಕ್ಕಮಗಳೂರಿನ ಜಿಲ್ಲೆಯಿಂದ ಹೊರಗಡೆ ಆಗಿದ್ದು ಎಂದರೆ ಸರಿ. ನಮ್ಮದು ಅತಿ ಸರಳವಾದ ಮದುವೆ ಎಂದರೆ ಸರಿ. ಹಿಂದೂ ಸಂಪ್ರದಾಯದಲ್ಲಿ ಮದುವೆ ಕಾಲಕ್ಕೆ ಹೆಣ್ಣಿಗೆ ಅವರ ತಂದೆತಾಯಿ ಒಡವೆಗಳನ್ನು ಹಾಕುವುದು ಪದ್ಧತಿ ಎಂದರೆ ಸರಿ. ಅದೇ ರೀತಿ ಹಿಂದೂ ಸಂಪ್ರದಾಯದಲ್ಲಿ ವರನಿಗೆ ವಧುವಿನ ಕಡೆಯವರು ವಾಚು, ಬಟ್ಟೆ ಉಂಗುರ ಇತ್ಯಾದಿ ಉಡುಗೂರೆ ಕೊಡುವ ಪದ್ಧತಿ ಇದೆ ಎಂದರೆ ಸಾಕ್ಷಿಯು ಹಿಂದೂ ಸಂಪ್ರದಾಯದಲ್ಲಿ ಇದೆ ಆದರೆ ನಮ್ಮ ಮನೆಯಲ್ಲಿ ಆ ಪದ್ಧತಿ ಇರುವುದಿಲ್ಲ. ಆದರೆ ನಾವು ಹುಡುಗನಿಗೆ ಒಂದು ಕೊರಳು ಚೈನನ್ನು ಕೊಟ್ಟಿರುತ್ತೇವೆ .

13. ನನ್ನ ಮದುವೆ ಕಾಲಕ್ಕೆ ನನ್ನ ತಂದೆ ಪೊಲೀಸ್

ಇಲಾಖೆಯಲ್ಲಿ ಎ.ಎಸ್.ಐ ಆಗಿದ್ದರು. ಅಷ್ಟೊತ್ತಿಗೆ ನನ್ನ ತಂದೆಗೆ ಇಲಾಖೆಯಲ್ಲಿ ಎಷ್ಟು ವರ್ಷ ಸೇವೆಯಾಗಿತ್ತು ಗೊತ್ತಿಲ್ಲ ಆದರೆ ಅವರು ನಿವೃತ್ತಿ ಸಮಯದಲ್ಲಿ ಇದ್ದರು. ನನ್ನ ತಂದೆಯವರು ಇಲಾಖೆಯಲ್ಲಿ ಉತ್ತಮವಾಗಿ ಸೇವೆ ಮಾಡಿಕೊಂಡು ಬರುತ್ತಿದ್ದರು ಅವರ ಮೇಲೆ ಯಾವುದೇ ಆರೋಪಗಳು ಇರಲಿಲ್ಲ. ನನ್ನ ತಂದೆಗೆ ಸರಿಯಾಗಿ ಕರ್ತವ್ಯ ಮಾಡಲು ಬರುವುದಿಲ್ಲ ಎಂಬ ಆರೋಪ ಇರಲಿಲ್ಲ ಅವರು ನಿಷ್ಟೆಯಿಂದ ಕೆಲಸ ಮಾಡುತ್ತಿದ್ದರು.

14. ನನ್ನನ್ನು ನಮ್ಮ ತಂದೆಯವರು ಆರೋಪಿಗಳ ಹಿನ್ನಲೆಯನ್ನು ತಿಳಿದುಕೊಂಡು ಮದುವೆ ಮಾಡಿ ಕೊಟ್ಟರು ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಗಳು ನಮ್ಮ ದೂರದ ಸಂಬಂಧಿಗಳು ಆಗಿರುವುದರಿಂದ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ಮದುವೆ ಕಾಲಕ್ಕೆ ನನ್ನ ಗಂಡ ಬೆಂಗಳೂರಿನ Infosys ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ಮದುವೆ ಮಾರ್ಚ್ 2013 ರಲ್ಲಿ ಆಗಿದ್ದು ಅವರು ಅದೇ ವರ್ಷ ಲಂಡನಿಗೆ ಹೋಗಿರುತ್ತಾರೆ. ಅವರು ಲಂಡನ್‌ಗೆ ಹೋಗಿದ್ದು ಕೂಡ ಕಂಪನಿಯ ಕೆಲಸದ ಮೇಲೆ ಎಂದರೆ ಸರಿ. ಅವರನ್ನು ಲಂಡನಿಗೆ ಕಳುಹಿಸಿದ್ದು ಕಂಪನಿಯೇ ಎಂದರೆ ಸರಿ. ನಮ್ಮ ಮದುವೆಗೆಂದು ನನ್ನ ಗಂಡ ಸುಮಾರು ಒಂದು ತಿಂಗಳು ರಜೆ ಹಾಕಿದ್ದರು. ಆ ಒಂದು ತಿಂಗಳ ಅವಧಿಯಲ್ಲಿ ನಾನು ನನ್ನ ತಂದೆತಾಯಿ ಮನೆಗೆ ಹೋಗುವುದು ಮತ್ತು ದೇವಸ್ಥಾನಗಳಿಗೆ

ಹೋಗುವುದು ಸಹಜವಾಗಿತ್ತು ಎಂದರೆ ಸರಿ. ನನ್ನ ಗಂಡನಿಗೆ ಲಂಡನಿಗೆ ವೀಸಾ ಸಿಗುವ ಸಾಧ್ಯತೆ ಇದ್ದುದರಿಂದ ಅವರು ಬೆಂಗಳೂರಿನಲ್ಲಿ ರೂಮು ಮಾಡಿಕೊಂಡಿದ್ದರು ನಾನು ಆಗ ಅವರ ಮನೆಯಲ್ಲಿ ಚಿಕ್ಕಮಗಳೂರಿನಲ್ಲಿ ಇದ್ದೆನು. ನನ್ನ ಗಂಡನು ಲಂಡನಿಗೆ ಹೋಗುವವರೆಗೂ ವಾರಕ್ಕೊಮ್ಮೆ ಚಿಕ್ಕಮಗಳೂರಿನ ನಾನಿದ್ದ ಅವರ ಮನೆಗೆ ಬಂದುಹೋಗುತ್ತಿದ್ದರು.

15. ಇಂಗ್ಲೆಂಡ್‌ಗೆ ವೀಸಾ ಅಷ್ಟು ಸರಳವಾಗಿ ಸಿಗುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ಗಂಡ ಇಂಗ್ಲೆಂಡ್‌ಗೆ ಹೋದ ಒಂದು ತಿಂಗಳೊಳಗೆ ನನ್ನ ವೀಸಾಗೆ ಅಪ್ಲೈ ಮಾಡಿದ್ದರು ಎಂದರೆ ನನಗೆ ನೆನಪಿಲ್ಲ. ನನ್ನ ಅಂಕೌಂಟೆಗೆ ಒಂದನೇ ಆರೋಪಿಯು ಲಂಡನಿನಲ್ಲಿ ಇದ್ದಾಗ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ಆದರೆ ನನ್ನ ಪಾಸ್‌ಬುಕ್, ಎಟಿಎಂ ಕಾರ್ಡ್ ಇವುಗಳನ್ನು ನನ್ನ ಅತ್ತೆ ಮಾವ ತೆಗೆದುಕೊಂಡಿದ್ದರು. ನಾನು 2017 ಜೂನ್ ಅಥವಾ ಜುಲೈ ತಿಂಗಳಲ್ಲಿ ಚಿಕ್ಕಮಗಳೂರಿನ ಎಂಇಎಸ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿ ಎಂದು ಸೇರಿರುತ್ತೇನೆ. ನನ್ನ ಗಂಡ ಹಣ ಕಳುಹಿಸುತ್ತಿದ್ದ ನನ್ನ ಬ್ಯಾಂಕ್ ಅಕೌಂಟ್ ಅದು ನನ್ನ ಮದುವೆಗೆ ಮುಂಚೆ ಮಾಡಿದ ಅಕೌಂಟ್ ಆಗಿರುತ್ತದೆ. ಸದರಿ ಅಕೌಂಟ್ ಇವತ್ತಿನವರೆಗೂ ಚಾಲ್ತಿಯಲ್ಲಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ನಾನು ಇಂಗ್ಲೆಂಡಿಗೆ ಹೋಗುವಾಗ ನನಗೆ ವೀಸಾ ಬಂದಿತ್ತು ಎಂದರೆ ಸಾಕ್ಷಿಯು ನನಗೆ ಕಂಪೆನಿಯಿಂದ

ಕಳುಹಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ವೀಸಾವನ್ನು ನನ್ನ ಗಂಡನ ಕೋರಿಕೆಯಂತೆ ನನಗೆ ಡಿಪೆಂಡೆಂಟ್ ವೀಸಾ ಎಂದು ಕೊಟ್ಟಿರುತ್ತಾರೆ. ಸದರಿ ವೀಸಾದಲ್ಲಿ date of issuance ನೋಡಿರುತ್ತೇನೆ ಆದರೆ ನನಗೆ ಈಗ ನೆನಪಿಲ್ಲ. ನಾನು ಇಂಗ್ಲೆಂಡಿಗೆ ಹೋದ ನಂತರವೂ ಕೂಡ ವೀಸಾ ತೆಗೆದುಕೊಳ್ಳುವುದರ ಬಗ್ಗೆ ನನಗೆ ಅಂತಹ ಕಷ್ಟ ಅನಿಸಲಿಲ್ಲ.

16. ನಾನು ನನ್ನ ಗಂಡನ ವಿರುದ್ಧ ಅವರ ಮಾಡುತ್ತಿದ್ದ ಕಂಪೆನಿಗೆ ಯೂವುದೇ ದೂರು ನೀಡಿರುವುದಿಲ್ಲ. ಲಂಡನಿನಿಂದ ಪ್ರಾಜೆಕ್ಟ್ ಕೆಲಸ ಮುಗಿಸಿ ಒಟ್ಟಿಗೆ ನಾನು ಮತ್ತು ನನ್ನ ಗಂಡ ಒಂದನೇ ಆರೋಪಿ ಬೆಂಗಳೂರಿಗೆ ಬಂದಿರುತ್ತೇವೆ . ಲಂಡನಿನಿಂದ ಬಂದ ನಂತರ ನನ್ನ ಗಂಡ ಬೆಂಗಳೂರಿನಲ್ಲಿ ವಾಸಿಸಲು ಮನೆ ಮಾಡಿದ್ದರ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ ಏಕೆಂದರೆ ಆ ಸಮಯದಲ್ಲಿ ವರದಕ್ಷಿಣೆ ವಿಚಾರವಾಗಿ ಒಂದನೇ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ್ದರಿಂದ ಪೊಲೀಸ್ ಕೇಸ್ ಆಗಿತ್ತು. ಸದರಿ ಕೇಸ್ ನಂಬರ್ ನನಗೆ ಈಗ ನೆನಪಿರುವುದಿಲ್ಲ. ಸದರಿ ಕೇಸಿನ ಮೇರೆಗೆ ಪೊಲೀಸರು ನನ್ನ ಮತ್ತು ಒಂದನೇ ಆರೋಪಿಯ ನಡುವೆ ರಾಜೀ ಮಾಡಿ ಕಳುಹಿಸಿರುತ್ತಾರೆ. 2015 ರಿಂದ 2017 ರವರೆಗೆ ನನ್ನ ಮತ್ತು ಒಂದನೇ ಆರೋಪಿಯ ನಡುವೆ ಗಲಾಟೆಯಾದ ಬಗ್ಗೆ ಯಾವುದೇ ಪೊಲೀಸ್ ಕೇಸ್ ಆಗಿರಲಿಲ್ಲ ಎಂದರೆ ಸರಿ. ನನ್ನ ಮಗ ಹುಟ್ಟಿದ 16.06.2016 ರಂದು ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಎಂದರೆ ಸರಿ. ನಾನು

ಸುಮಾರು 9 ತಿಂಗಳ ಕಾಲ ಬಾಣಂತನಕ್ಕೆಂದು ನನ್ನ ತವರು ಮನೆಯಲ್ಲೇ ಇದ್ದೇನು ಎಂದರೆ ಸರಿ. ಆ ಸಮಯದಲ್ಲಿ ನನ್ನ ಮಗನಿಗೆ ರುತ್ವಿಕ್ ಗೌಡ ಎಸ್ ಎಂದು ಹೆಸರಿಟ್ಟಿದೇವು ಎಂದರೆ ಸರಿ. ಸಾಕ್ಷಿಯ ಮಗನ ಜನನ ಪ್ರಮಾಣ ಪತ್ರವನ್ನು ಆರೋಪಿ ಪರ ವಕೀಲರು ಹಾಜರುಪಡಿಸಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ನನಗೆ ಮಗ ಹುಟ್ಟಿದ ಸಮಯದಲ್ಲಿ ನನ್ನ ತಂದೆ ಸೇವೆಯಿಂದ ನಿವೃತ್ತಿಯಾಗಿ ಮನೆಯಲ್ಲೇ ಇರುತ್ತಿದ್ದರು ಎಂದರೆ ಸರಿ. ನನ್ನ ಹೆರಿಗೆಯಾದ ಒಂಭತ್ತು ತಿಂಗಳ ನಂತರ ಒಂದನೇ ಆರೋಪಿಯು ನನ್ನನ್ನು ಮತ್ತು ಮಗುವಿನೊಂದಿಗೆ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನನ್ನು ಮತ್ತು ಮಗುವನ್ನು ಬನ್ನೇರುಘಟ್ಟ ರಸ್ತೆಯ ಕಲ್ಯಾಣಿ ಸನ್‌ಶೈನ್ ಅಪಾರ್ಟಮೆಂಟಿನ ಮೂರನೇ ಮಹಡಿಯ ಮನೆ ನಂ. 303 ಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಏರಿಯಾದಲ್ಲಿ ಪ್ರತಿಷ್ಠಿತ ಆಸ್ಪತ್ರೆಗಳು ಇರುತ್ತವೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಆ ಸಮಯದಲ್ಲಿ ನನಗೆ ಬೆಂಗಳೂರಿನ ಏರಿಯಾಗಳು, ರಸ್ತೆಗಳು ಆಸ್ಪತ್ರೆಗಳು ಇತ್ಯಾದಿಗಳ ಬಗ್ಗೆ ಅಷ್ಟು ಮಾಹಿತಿ ಇರಲಿಲ್ಲ. ನಾನು ಇದ್ದಂತಹ ಮನೆಯಿಂದ ವಿಕ್ಟೋರಿಯಾ ಆಸ್ಪತ್ರೆ ಸುಮಾರು 5 ಕಿ.ಮೀ ದೂರದಲ್ಲಿ ಇರುತ್ತದೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ.

17. ದಿನಾಂಕಃ 07.05.2017 ರಂದು ನಾನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದೆನು ಎಂದರೆ ಸರಿ. ನಾನು ಸದರಿ

ಆಸ್ಪತ್ರೆಗೆ ದಾಖಲಾಗಲು ನನ್ನ ಗಂಡ ಒಂದನೇ ಆರೋಪಿ ಮೊಬೈಲ್ ಚಾರ್ಜರ್ ವೈರಿನಿಂದ ಕುತ್ತಿಗೆ ಹಿಸುಕಲು ಪ್ರಯತ್ನಪಟ್ಟ ಎಂದು ನಾನು ಆಸ್ಪತ್ರೆಗೆ ದಾಖಲಾಗಿರುತ್ತೇನೆ ಎಂದರೆ ಸಾಕ್ಷಿಯು ಒಂದನೇ ಆರೋಪಿಯು ನನ್ನನ್ನು ತನ್ನ ಕೈಯಿಂದ ನನ್ನ ಕುತ್ತಿಗೆಯನ್ನು ಹಿಸುಕಲು ಪ್ರಯತ್ನಪಟ್ಟನು ಎಂದು ದಾಖಲಾಗಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಆಸ್ಪತ್ರ್ರೆ ಯಲ್ಲಿ ನಾನು ವೈಧ್ಯರಿಗೆ ನನ್ನ ಕುತ್ತಿಗೆಯ ಮೇಲೆ ಆಗಿರುವ ಗಾಯಗಳನ್ನು ತೋರಿಸಿ ಎಂಟ್ರಿ ಮಾಡಿಸಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ಹತ್ತಿರ ಮೊಬೈಲ್ ಇರಲಿಲ್ಲ, ಅದು ಹಾಳಾಗಿ ಹೋಗಿತ್ತು. ಆ ಸಮಯದಲ್ಲಿದ್ದ ನನ್ನ ಮೊಬೈಲ್ ನಂಬರನ್ನು ಈಗ ನನಗೆ ಹೇಳಲು ಆಗುವುದಿಲ್ಲ. ನಾನು ಆ ದಿನ ವಿಕ್ಟೋರಿಯಾ ಆಸ್ಪತ್ರೆಗೆ ಹೋಗುವ ಅವಧಿಯಲ್ಲಿ ನನ್ನ ತಂದೆತಾಯಿಯರ ಜೊತೆ ಕಾಯಿನ್ ಬೂತಿನಿಂದ ಫೋನಿನಲ್ಲಿ ಮಾತಾನಾಡಿರುತ್ತೇನೆ , ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ಮಾತನಾಡಲು ನನ್ನ ತಂದೆತಾಯಿಯವರಿಗೆ ಪ್ರಯತ್ನಪಟ್ಟೆ ಆದರೆ ಫೋನ್ ರಿಚ್ ಆಗಲಿಲ್ಲ ಆದ್ದರಿಂದ ನನ್ನ ತಂಗಿಗೆ ಫೋನ್ ಮಾಡಿರುತ್ತೇನೆ.

18. ಹರೀಶ್ ಇವರು ನನ್ನ ತಂಗಿಯ ಗಂಡ ಇರುತ್ತಾರೆ. ನನ್ನನ್ನು ಆಸ್ಪತ್ರೆಗೆ ನನ್ನ ತಂಗಿ ಮತ್ತು ಅವಳ ಗಂಡ ಕರೆದುಕೊಂಡು ಹೋಗಿರುತ್ತಾರೆ. ನಾನು ಪೋಲೀಸ್ ಠಾಣೆಗೆ ಹೋದಾಗ ಸಮಯ ಎಷ್ಟಾಗಿತ್ತು ನನಗೆ ನೆನಪಿಲ್ಲ. ನನ್ನ ಅಕೌಂಟ್‌ಗೆ

ದಿನಾಂಕಃ 03.05.2017 ರವರೆಗೂ ನನ್ನ ಗಂಡ ಒಂದನೇ ಆರೋಪಿ ಹಣ ಹಾಕಿರುತ್ತಾರೆ ಎಂದರೆ ನನಗೆ ಅದರ ಬಗ್ಗೆ ನೆನಪಿಲ್ಲ ಎಂದು ಸಾಕ್ಷಿಯು ಹೇಳುತ್ತಾರೆ. ನನ್ನ ಪಾಸ್‌ಬುಕ್ ಅಕೌಂಟ್ ಮತ್ತು ಎಟಿಎಂ ಕಾರ್ಡ್ ಆ ಸಮಯದಲ್ಲಿ ಬೇರೆಯವರು ಉಪಯೋಗಿಸುತ್ತಿದ್ದ ಬಗ್ಗೆ ನಾನು ಬೆಂಗಳೂರಿನಲ್ಲಿ ಕೊಟ್ಟ ದೂರಿನಲ್ಲಾಗಲೀ ಅಥವಾ ಪ್ರಸ್ತುತ ಪ್ರಕರಣದ ದೂರಿನಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ.

19. 2015 ರಲ್ಲಿ ನನ್ನ ತಂದೆ ಮನೆ ಕಟ್ಟುತ್ತಿದ್ದರು ಎಂದರೆ ಆ ಸಮಯಕ್ಕೆ ಮನೆ ಕಟ್ಟಿ ಆಗಿಹೋಗಿತ್ತು ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಂದೆಯ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಂದೆಯ ಅಕೌಂಟಿಗೆ ಒಂದನೇ ಆರೋಪಿ ಲಕ್ಷಲಕ್ಷ ಹಣ ಜಮಾ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಲಕ್ಷಲಕ್ಷ ಹಣವಲ್ಲ ಕೇವಲ ಒಂದು ಲಕ್ಷ ಮಾತ್ರ ಜಮಾ ಮಾಡಿದ್ದು ಅದು ನಾವು ಕೊಟ್ಟ ಸಾಲವಾಗಿರುತ್ತದೆ. ನನ್ನ ತಂದೆಯ ಅಕೌಂಟಿಗೆ ಬೇರೆ ಯಾವುದೇ ಮೂಲದಿಂದ ಜಮಾ ಆಗುವುದಿಲ್ಲ. ನಾನು ಚಿಕ್ಕಮಗಳೂರಿನ ಎಂಇಎಸ್ ಕಾಲೇಜಿಗೆ ಸೇರಿದ ಸಮಯದಲ್ಲಿ ನನ್ನ ಗಂಡ ನಾವು ಬೆಂಗಳೂರಿನಲ್ಲಿ ವಾಸವಿದ್ದ ಮನೆಯಲ್ಲಿ ಇದ್ದರ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ಎಂಇಎಸ್ ಕಾಲೇಜಿಗೆ ಸೇರುವ ಸಮಯದಲ್ಲಿ ನನ್ನ ಯಾವುದೇ ಮಾಹಿತಿಯನ್ನು ಕೊಟ್ಟಿರಲಿಲ್ಲ. ನಾನು ಅರ್ಜಿಯನ್ನು ಸಹ ಸಲ್ಲಿಸಿರಲಿಲ್ಲ ಮತ್ತು ಕಾಲೇಜಿನವರು

ನೇಮಕಾತಿ ಪತ್ರವನ್ನು ಸಹ ನನಗೆ ಕೊಟ್ಟಿರಲಿಲ್ಲ ಆ ಸಮಯದಲ್ಲಿ ನನ್ನ ಹತ್ತಿರ ಮೊಬೈಲ್ ಇತ್ತು, ಅದರ ಪೋನ್ ನಂ. 9742672392. ನನ್ನ ಮೊಬೈಲ್‌ನ ಟವರ್ ಲೋಕೇಶನ್ 27.09.2017 ರವರೆಗೂ ಚಿಕ್ಕಮಗಳೂರಿನ ಲಕ್ಷ್ಮೀಶನಗರ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಇತ್ತು ಎಂದು ಹೇಳುತ್ತಾರೆ. ನನ್ನ ಮೊಬೈಲ್ ದಿನಾಂಕಃ 27.09.2017 ರಂದು ಬೆಳ್ಳಿಗ್ಗೆ ಮಾತ್ರ ಮತ್ತು ನಂತರದ ಒಂದು ದಿನ ಮಾತ್ರ ಲಕ್ಷ್ಮೀಶನಗರದ ಟವರ್ ಲೋಕೇಶನ್‌ನ ವ್ಯಾಪ್ತಿಯಲ್ಲಿ ಇತ್ತು ಎಂದರೆ ಸಾಕ್ಷಿ ಆ ಸಮಯದಲ್ಲಿ ನನ್ನ ಮೊಬೈಲ್ ನನ್ನ ಹತ್ತಿರ ಇರಲಿಲ್ಲ. ಆ ಸಮಯದಲ್ಲಿ ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದರು. ಮೇಲೆ ಹೇಳಿದ ಫೋನ್ ನಂಬರ್ ಹೊರತುಪಡಿಸಿ ಬೇರೆ ನಂಬರ್ ನನ್ನ ಹತ್ತಿರ ಇತ್ತಾ ಎಂದರೆ ನನಗೆ ನೆನಪಿಲ್ಲ ಆದರೆ ನನ್ನ ಐಡಿಯಿಂದ ನನ್ನ ಗಂಡನಿಗೆ ಒಂದು ಮೊಬೈಲ್ ಸಿಮ್‌ನ್ನು ಕೊಡಿಸಿರುತ್ತೇನೆ. ಸದರಿ ನಂಬರ್ ನನಗೆ ನೆನಪಿಲ್ಲ. ನಾನು ನೀಡಿದ ದೂರಿನಲ್ಲಿರುವ ಫೋನ್ ನಂಬರ್ ನನ್ನ ತಂದೆಯ ನಂಬರ್ ಇರುತ್ತದೆ. ಈಗಲೂ ಕೂಡ ನಾನು ನಂ. 9742672392 ಇದನ್ನೇ ಉಪಯೋಗಿಸುತ್ತಿದ್ದೇನೆ. ಈಗಲೂ ಕೂಡ ನಾನು ನನ್ನ ಗಂಡನಿಗೆ ವಾಟ್ಸಪ್ ಮೇಸೇಜ್ ಮಾಡುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ಮಗುವಿನ ವಿಚಾರವಾಗಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಈಗ ಸಾಕ್ಷಿಗೆ ಆರೋಪಿ ಪರ ವಕೀಲರು ಒಂದು ಮೇಸೇಜ್ ಚಾಟ್‌ನ

ಒಂದು ಪ್ರತಿಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ತಾನು ತನ್ನ ಗಂಡನೊಂದಿಗೆ ಮಗುವಿನ ವಿಚಾರವಾಗಿ ಮಾಡಿದ ಚಾಟ್ ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಮೇಸೇಜ್ ಚಾಟ್ ನ ಪ್ರತಿಯನ್ನು ನಿ.ಡಿ.2 ಎಂದು ಗುರುತಿಸಲಾಯಿತು.

20. ಪ್ರಸ್ತುತ ಪ್ರಕರಣದ ದೂರು ಸಲ್ಲಿಸಿದ ನಂತರವೂ ನಾನು ಒಂದನೇ ಆರೋಪಿಯೊಂದಿಗೆ ಬೆಂಗಳೂರಿನಲ್ಲಿ ವಾಸವಿದ್ದೆನು ಎಂದರೆ ಸರಿ, ಸಾಕ್ಷಿ ಮುಂದುವರೆದು ಅಂದಿನ ಎಸ್.ಪಿ ಒತ್ತಾಯ ಮಾಡಿ, ಹೋಗದಿದ್ದರೆ ಪ್ರಕರಣದಲ್ಲಿ ಬಿ ರಿಪೋರ್ಟ್ ಹಾಕಿಸುತ್ತೇನೆ ಎಂದು ಹೇಳಿದ್ದರಿಂದ ನಾನು ಒಂದನೇ ಆರೋಪಿಯೊಂದಿಗೆ ಹೋಗಿ ವಾಸವಿದ್ದೆನು. ಹಾಗಾಗಿ ನಾನು, ನನ್ನ ಮತ್ತು ನನ್ನ ತಂದೆತಾಯಿಯ ಇಚ್ಛೆಗನುಗುಣವಾಗಿ ಹೋಗಿರುವುದಿಲ್ಲ. ಈ ಪ್ರಕರಣದಲ್ಲಿ ದೋಷಾರೋಪಣ ಪತ್ರ ಸಲ್ಲಿಸುವ ಮುನ್ನಾ ಒಂದನೇ ಆರೋಪಿ ಮನೆಯಿಂದ ಹೊರಬಂದಿರುತ್ತೇನೆಯೋ ಅಥವಾ ಆರೋಪ ಪಟ್ಟಿ ಸಲ್ಲಿಸಿದ ನಂತರ ಬಂದಿರುತ್ತೇನೆಯೋ ನನಗೆ ನೆನಪಿಲ್ಲ.

21. ಆರೋಪಿ ಪರ ವಕೀಲರು ಸಾಕ್ಷಿಗೆ ಒಟ್ಟು ಮೂರು ಪೋಟೋಗಳನ್ನು ತೋರಿಸಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿ ಅವು ಒಂದನೇ ಆರೋಪಿಯೊಂದಿಗೆ ತಾನು ಮಾಡಿದ ನಾರ್ಮಲ್ ಮೇಸೆಜ್ ಚಾಟ್ ಆಗಿರುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ. ಆದ್ದರಿಂದ ಸದರಿ ಮೇಸೇಜ್ ಚಾಟ್‌ಗಳ ಪ್ರತಿಗಳನ್ನು ಕ್ರಮವಾಗಿ ನಿ.ಡಿ.3, 4 ಮತ್ತು ನಿ.ಡಿ.5 ಎಂದು

ಗುರುತಿಸಲಾಯಿತು. ಸಾಕ್ಷಿಗೆ ತಮ್ಮ ಮಗನ ಇನ್ನೊಂದು ಜನನ ಪ್ರಮಾಣ ಪತ್ರವನ್ನು ಆರೋಪಿ ಪರ ವಕೀಲರು ತೋರಿಸಿದ್ದು ಅದನ್ನು ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಅದನ್ನು ನಿ.ಡಿ.6 ಎಂದು ಗುರುತಿಸಲಾಯಿತು. ಸದರಿ ಜನನ ಪ್ರಮಾಣ ಪತ್ರದಲ್ಲಿ ತನ್ನ ಮಗುವಿನ ಹೆಸರಿನ್ನು ಬದಲಿಸಿದಲ್ಲದೇ ಈ ಹಿಂದಿನ ಜನನ ಪ್ರಮಾಣ ಪತ್ರದಲ್ಲಿ ತನ್ನ ಮಗುವಿನ ಮುಂದೆ ಅಪ್ಪನ ಹೆಸರನ್ನು ಸೂಚಿಸುವ ಎಸ್. ಎಂಬ ಇನ್ಷಿಯಲ್‌ನ್ನು ಬದಲಿಸಿರುತ್ತೀರಿ ಎಂದರೆ ಸಾಕ್ಷಿಯು ನಿ.ಡಿ.6 ಜನನ ಪ್ರಮಾಣ ಪತ್ರದಲ್ಲಿ ನನ್ನ ಗಂಡ ಒಂದನೇ ಆರೋಪಿಯೇ ಬದಲಾವಣೆ ಮಾಡಿರುತ್ತಾರೆ ಎಂದು ಸಾಕ್ಷಿ ಹೇಳಿರುತ್ತಾರೆ. ನನ್ನ ಮಗುವಿನ ಆಧಾರ್ ಕಾರ್ಡ್‌ಗೆ ನನ್ನ ಕೈ ಹಸ್ತದ ಗುರುತು ನೀಡಿರುತ್ತೇನೆ. ಸಾಕ್ಷಿಯು ತನ್ನ ಮಗುವಿನ ಆಧಾರ್ ಕಾರ್ಡ್ ನ್ನು ಗುರುತಿಸಿದ್ದು ಅದನ್ನು ನಿ.ಡಿ.7 ಎಂದು ಗುರುತಿಸಲಾಯಿತು. ನಿ.ಡಿ.7 ಆಧಾರ್ ಕಾರ್ಡಿನಲ್ಲಿ ನನ್ನ ಮಗುವಿನ ತಂದೆಯ ಹೆಸರಿಲ್ಲ ಎಂದರೆ ಸರಿ. ನಿ.ಡಿ.2 ಮೇಸೆಜ್ ಚಾಟ್ ನಲ್ಲಿ " Also bring DNA certificate if u r his real biological father" ಎಂದು ಕಳುಹಿಸಿದ್ದೇನೆ ಎಂದರೆ ಸರಿ.

22. ಇಲ್ಲಿಯವರೆಗೆ ನಾನು ನನ್ನ ಗಂಡ ಒಂದನೇ ಆರೋಪಿಯ ವಿರುದ್ಧ ಜೀವನಾಂಶಕ್ಕಾಗಿ ಯಾವುದೇ ಕೇಸನ್ನು ಹಾಕಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ದೂರು ಸಲ್ಲಿಸಿದಾಗಿನಿಂದ ಇಲ್ಲಿಯವರೆಗೂ ನನ್ನ ತಂದೆತಾಯಿ ನನ್ನ ಬೆಂಬಲಕ್ಕೆ ನಿಂತಿರುತ್ತಾರೆ ಎಂದರೆ ಸರಿ. ನನ್ನ ತಂದೆ ತಮ್ಮ ಸೇವಾ

ಅವಧಿಯಲ್ಲಿ ಹಲವಾರು ಪ್ರಕರಣಗಳಲ್ಲಿ ತನಿಖೆ ಮಾಡಿರುತ್ತಾರೆ ಮತ್ತು ಅವುಗಳ ಕುರಿತಂತೆ ನ್ಯಾಯಾಲಯಗಳಲ್ಲಿ ಸಾಕ್ಷ್ಯ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ಚಿಕ್ಕಮಗಳೂರಿನ ಹಲವಾರು ಜನರ ಮೇಲೆ ಹಲವಾರು ಕೇಸುಗಳನ್ನು ಹಾಕಿರುತ್ತಾರೆ ಎಂದರೆ ಸರಿ. ನನ್ನ ತಾಯಿಯು ತನ್ನ ತಂದೆ ಮತ್ತು ಸಹೋದರರ ಮೇಲೆ ಆಸ್ತಿ ವಿವಾದದ ಕುರಿತಂತೆ ಪಾರ್ಟಿಷನ್ ಸೂಟ್ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದಿನ ವಕೀಲರಾದ ಶ್ರೀ ವಿಟಿಟಿ ರವರ ಕಛೇರಿಯಲ್ಲಿ ಪ್ರಕರಣದಲ್ಲಿ ರಾಜೀ ಮಾಡಿಕೊಳ್ಳುವ ಕುರಿತಂತೆ ಮಾತುಕತೆಯಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನಾನು ಒಂದು ಭದ್ರತಾ ಪತ್ರವನ್ನು ತಯಾರಿಸಿಕೊಂಡು ವಿಟಿಟಿ ವಕೀಲರಿಗೆ ಕೊಟ್ಟಿದ್ದೇವು ಎಂದರೆ ಸರಿ. ಸದರಿ ಭದ್ರತಾ ಪತ್ರದಲ್ಲಿ ಆರೋಪಿಗಳ ಎಲ್ಲಾ ಆಸ್ತಿಗಳನ್ನು ನನ್ನ ಹೆಸರಿಗೆ ಬರೆದುಕೊಡಬೇಕೆಂದು ಕಂಡಿಷನ್ ಹಾಕಿದ್ದೇನು ಎಂದರೆ ಸರಿಯಲ್ಲ. ಆರೋಪಿಗಳು ಆಸ್ತಿ ಮಾರಾಟ ಮಾಡಿದ ಮೇಲೆ ನಾನು ಅದಕ್ಕೆ ತಕರಾರುಗಳನ್ನು ಮೇಸೆಜ್ ಮುಖಾಂತರ ಅವರಿಗೆ ಕಳುಹಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಪಿತ್ರಾರ್ಜಿತ ಆಸ್ತಿ ಮಾರಾಟಮಾಡಿದ್ದರಿಂದ ತಕರಾರು ಸಲ್ಲಿಸಿರುತ್ತೇನೆ.

23. ನಾನು ಬೆಂಗಳೂರಿನ ಪೋಲೀಸ್ ಠಾಣೆಯಲ್ಲಿ ನೀಡಿದ ದೂರಿನಲ್ಲಿ ಮತ್ತು ಚಿಕ್ಕಮಗಳೂರಿನ ಮಹಿಳಾ ಪೋಲೀಸ್

ಠಾಣೆಯಲ್ಲಿ ನೀಡಿದ ದೂರಿನಲ್ಲಿ ನನ್ನ ಕುತ್ತಿಗೆಯನ್ನು ತೋರಿಸಿ ಕುತ್ತಿಗೆ ಮೇಲೆ ಆದ ಗುರುತುಗಳನ್ನು ತೋರಿಸಿ ದೂರು ನೀಡಿರುತ್ತೇನೇಂದರೆ ಸಾಕ್ಷಿಯು ತಾನು ಬೆಂಗಳೂರಿನ ಪೋಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ಒಂದನೇ ಆರೋಪಿಯು ನನ್ನ ಕುತ್ತಿಗೆ ಹಿಸುಕಿ ಕೊಲೆ ಯತ್ನ ಮಾಡಿರುತ್ತಾನೆ ಎಂದು ದೂರು ನೀಡಿರುತ್ತೇನೆ ಮತ್ತು ಚಿಕ್ಕಮಗಳೂರಿನ ಮಹಿಳಾ ಪೋಲೀಸ್ ಠಾಣೆ ಯಲ್ಲಿ ನೀಡಿದ ದೂರಿನಲ್ಲಿ ನನ್ನನ್ನು ನನ್ನ ಮಾವ ಅಂದರೆ ಮೂರನೇ ಆರೋಪಿ ನನ್ನ ಕುತ್ತಿಗೆಗೆ ಮೊಬೈಲ್ ಚಾರ್ಜರ್ ವೈರ್ನಿಂದ ಕೊಲೆಮಾಡಲು ಪ್ರಯತ್ನಪಟ್ಟರು ಎಂದು ದೂರ ನ್ನು ನೀಡಿರುತ್ತೇನೆ .

(ಈ ಹಂತದಲ್ಲಿ ನ್ಯಾಯಾಲಯದ ಸಮಯವಾದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ರೂ.

ದಿನಾಂಕಃ 18-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – ಆರೋಪಿತರ ಪರವಾಗಿ

24. ನಾನು ಪಿಹೆಚ್‌ಡಿ ಮಾಡುವ ಕಾಲಕ್ಕೆ ಬೀರೂರಿನಲ್ಲಿ ನನ್ನ ತಂದೆ ತಾಯಿ ಜೊತೆ ವಾಸವಿದ್ದೆನು ಮತ್ತು ಮದುವೆಯಾದ ನಂತರ ಗಂಡನ ಮನೆಯಲ್ಲಿ ವಾಸವಾಗಿದ್ದೆನು. ನಾನು ಪಿಹೆಚ್‌ಡಿ ಮಾಡುವ ಕಾಲಕ್ಕೆ ಭೌತಿಕ ತರಗತಿಗಳಿಗೆ ಲಕ್ಕವಳ್ಳಿ ಹತ್ತಿರ ಇರುವ ಶಂಕರ ಘಟದ ಸಂಶೋಧನಾ ಕೇಂದ್ರದಲ್ಲಿ ಹಾಜರಾಗುತ್ತಿದ್ದೆನು. ನಾನು ಶಂಕರ ಘಟ್ಟದಲ್ಲಿ ತರಗತಿಗಳಿಗೆ ಹಾಜರಾಗುತ್ತಿದ್ದ ಕಾಲದಲ್ಲಿ ನನ್ನ ಬ್ಯಾಂಕ್ ಅಕೌಂಟ್ ನ ಎಟಿಎಂ ಆಪರೇಟ್ ಆಗಿರಲಿಲ್ಲ. ನಾನು ಇಲ್ಲಿಯವರೆಗೂ ನನ್ನ ಬ್ಯಾಂಕ್ ಅಕೌಂಟ್ ಗೆ ಸಂಬಂಧಿಸಿದ ಎಟಿಎಂ ಕಾರ್ಡನ್ನು ಬೇರೆಯವರು ಉಪಯೋಗಿಸುತ್ತಿದ್ದ ಬಗ್ಗೆ ಯಾವುದೇ ಪ್ರಾಧಿಕಾರದ ಮುಂದೆ ನಾನು ದೂರನ್ನು ಸಲ್ಲಿಸಿರುವುದಿಲ್ಲ. ನನ್ನ ಜನ್ಮ ದಿನಾಂಕ ದಾಖಲಾತಿಗಳ ಪ್ರಕಾರ 06-09-1985. ಆದರೆ ನನ್ನ ನಿಜವಾದ ಜನ್ಮ ದಿನಾಂಕಃ 05-06-1986.

25. ಸಾಕ್ಷಿಗೆ ಆರೋಪಿ ಪರ ವಕೀಲರು ಒಂದು ಫೋಟೋವನ್ನು ತೋರಿಸಿದ್ದು ಅದರಲ್ಲಿ ತಾನು ಮತ್ತು ತನ್ನ ಮಗ ಇರುವುದನ್ನು ಗುರುತಿಸುತ್ತಾರೆ. ಸದರಿ ಫೋಟೋ ವನ್ನು ನಿಡಿ.8 ಎಂದು ಗುರುತಿಸಲಾಯಿತು. ಸದರಿ ಫೋಟೋ ದಲ್ಲಿ ತನ್ನ ಕೈನ ನಡುಬೆರಳಿನಲ್ಲಿ ವಜ್ರದ ಉಂಗುರ ಇರುವ ಬಗ್ಗೆ ಕಂಡು ಬರುತ್ತದೆ ಎಂದರೆ ಸಾಕ್ಷಿಯು ಅದು ವಜ್ರದ ಉಂಗುರವಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಕಂಡಾಲಾ ಇವರು ವಜ್ರ ದ ಉಂಗುರ ಮತ್ತು ಒಂದು ಜೊತೆ ಕಿವಿ ಓಲೆ ಖರೀದಿ ಮಾಡಿದ ಬಾಬ್ತು ನೀಡಿದ ಬಿಲ್ಲಾಗಿದ್ದು , ಅದರಂತೆ ನನ್ನ ಗಂಡ 1 ನೇ ಆರೋಪಿ ನನ್ನ ಜನ್ಮ ದಿನದಂದು ಒಂದು ವಜ್ರದ ಉಂಗುರ ಮತ್ತು ಒಂದು ಜೊತೆ ಕಿವಿ ಓಲೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.8 ಫೋಟೋ ಇದು

ಇತ್ತೀಚಿನ ದಿನಗಳಲ್ಲಿ ನನ್ನ ಮಗನ ಜನ್ಮ ದಿನದಂದು ತೆಗೆದ ಪೋಟೋ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಪೋಟೋ ವನ್ನು 3 ವರ್ಷಗಳ ಹಿಂದೆ ತೆಗೆದಿದ್ದು ಆಗಿರುತ್ತದೆ ಎಂದು ಹೇಳುತ್ತಾರೆ. ನನ್ನ ಮಗನಿಗೆ ಈಗ 5 ವರ್ಷ 3 ತಿಂಗಳು ವಯಸ್ಸು ಇರುತ್ತದೆ. ನನ್ನ ಮಗ ಕಳೆದ 3 ವರ್ಷಗಳಿಂದ ಒಂದೇ ಎತ್ತರ ಮತ್ತು ಗಾತ್ರ ಇರುತ್ತಾನೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ

26. ಇಲ್ಲಿಯವರೆಗೂ ನಮ್ಮ ಕುಟುಂಬದ ಯಾವುದೇ ಸದಸ್ಯರ ಬ್ಯಾಂಕ್ ಅಕೌಂಟ್ ನಿಂದ ಆರೋಪಿಗಳ ಯಾವುದೇ ಸದಸ್ಯರ ಬ್ಯಾಂಕ್ ಅಕೌಂಟ್ ಗಳಿಗೆ ಹಣ ವರ್ಗಾವಣೆಯಾದ ಬಗ್ಗೆ ನನಗೆ ಗೊತ್ತಿಲ್ಲ ಅದರೆ ಸಾಕ್ಷಿಯು ಸ್ವತಃ ನಾವು ಒಂದು ಲಕ್ಷ ರೂ ನಗದು ಹಣ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಆ ರೀತಿ ಒಂದು ಲಕ್ಷ ರೂ. ಗಳನ್ನು ನಾವು ಆರೋಪಿಗಳಿಗೆ ನಗದಾಗಿ ಕೊಟ್ಟಿರುವ ಯಾವುದಾದರೂ ದಾಖಲೆಗಳು ನನ್ನ ಬಳಿ ಇರುತ್ತವಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ನನ್ನ ಗಂಡ 1 ನೇ ಆರೋಪಿಯ ಚಿಕ್ಕಮಗಳೂರಿನ ಮನೆಯಲ್ಲಿ ವಾಸವಿದ್ದ ಬಗ್ಗೆ ನನ್ನ ಡಿಎಲ್ ಮತ್ತು ಚುನಾವಣಾ ಗುರುತಿನ ಪತ್ರದಲ್ಲಿ ಪ್ರೂಫ್ ಇರುತ್ತದೆ ನಾನು ನನ್ನ ಮದುವೆಯಾದ ನಂತರ ನನ್ನ ಗಂಡನ ಮನೆಯಲ್ಲಿ ಇದ್ದಾಗ ಸದರಿ ಡಿಎಲ್ ಮತ್ತು ಚುನಾವಣಾ ಗುರುತಿನ ಪತ್ರವನ್ನು ನನ್ನ ಗಂಡನ ಸಹಕಾರದಿಂದ ಮಾಡಿಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಡಿಎಲ್ ಮತ್ತು ಗುರುತಿನ ಪತ್ರವನ್ನು ನನ್ನ ಗಂಡನ ಮನೆಯಲ್ಲಿದ್ದಾಗ ಮಾಡಿಸಿರುತ್ತೇನೆ ಆದರೆ ಇದರಲ್ಲಿ ನನ್ನ ಗಂಡನ ಸಹಕಾರದ ಪ್ರಶ್ನೆಯೇ ಬರುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು 2 ಸಲ ಇಂಗ್ಲೇಂಡ್ ಗೆ ಹೋಗಿ ಬಂದಿರುತ್ತೇನೆ ಎಂದರೆ ಸರಿ. ಒಂದು ಸಲ ನನ್ನ ಗಂಡನ ಸ್ಪಾನ್ಸರ್ ನಿಂದ ಮತ್ತು ಮತ್ತೊಂದು ಸಲ ಕಂಪನಿಯ ಸ್ಪಾನ್ಸರ್ ನಿಂದ ಹೋಗಿ ಬಂದಿರುತ್ತೇನೆ ಎಂದರೆ ಸಾಕ್ಷಿಯು ಕಂಪನಿಯಿಂದ ಹೋಗಿ ಬಂದಿರುತ್ತೇನೆ

ಎಂದು ಹೇಳುತ್ತಾರೆ. ಆ ರೀತಿ ನಾನು ಕಂಪನಿ ಸ್ಪಾನ್ಸರ್ ನಿಂದ ಇಂಗ್ಲೇಂಡ್ ಗೆ ಹೋಗಿದ್ದು, ಸದರಿ ಕಂಪನಿಯಲ್ಲಿ ನಾನು ಉದ್ಯೋಗಿ ಆಗಿರಲಿಲ್ಲ ಎಂದರೆ ಸರಿ. ನಾನು ಪಿಹೆಚ್‌ಡಿ ಮಾಡುವ ಕಾಲಕ್ಕೆ ಸಂಶೋಧನಾ ಕೇಂದ್ರಕ್ಕೆ ನಾನು ಒಬ್ಬಳೇ ಹೋಗಿ ಬರುತ್ತಿದ್ದೆನು. ಅದೇ ರೀತಿ ನಾನು ಚಿಕ್ಕಮಗಳೂರಿನ ಎಂಇಎಸ್ ಕಾಲೇಜಿನಲ್ಲಿ ಲೆಕ್ಚರ್ ಮಾಡಲು ಒಬ್ಬಳೇ ಹೋಗಿ ಬರುತ್ತಿದ್ದೆನು. ನನ್ನ ಮದುವೆಯಾಗುವ ಎಷ್ಟು ವರ್ಷಗಳ ಮುಂಚೆ 4 ನೇ ಆರೋಪಿ ಗೀತಾ ಇವರ ಮದುವೆಯಾಗಿತ್ತು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಾವ 3 ನೇ ಆರೋಪಿ ಯಾವಾಗ ಸೇವೆಯಿಂದ ನಿವೃತ್ತಿಯಾಗಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ಮಾವ 3 ನೇ ಆರೋಪಿಗೆ ಚಿಕ್ಕಮಗಳೂರಿನಲ್ಲಿರುವ ಮನೆ ಬಿಟ್ಟು , ಸಿರಗಾಪುರ , ಹರಿಹರದಹಳ್ಳಿಯಲ್ಲಿ ಜಮೀನು ಇರುತ್ತದೆ. ನಾನು ಸದರಿ ಊರುಗಳಿಗೆ ಹೋಗಿ ಬಂದಿರುತ್ತೇನೆ. 3 ನೇ ಆರೋಪಿ ನಿವೃತ್ತಿಯಾದ ನಂತರ ತಮ್ಮ ಹಳ್ಳಿಗೆ ಹೋಗಿ ಕೃಷಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಜಮೀನುಗಳನ್ನು ಕೋರೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ನನ್ನ ಕುಟುಂಬದ ಆದಾಯಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಆದರೆ ನಿಖರವಾಗಿ ಗೊತ್ತಿಲ್ಲ.

27. ಚಿಕ್ಕಮಗಳೂರಿನ ಆರೋಪಿಗಳ ಮನೆಯ ಅಕ್ಕ ಪಕ್ಕದಲ್ಲಿದ್ದ ನೆರೆಹೊರೆಯವರ ಬಗ್ಗೆ ನನಗೆ ಗೊತ್ತು. ತಿಮ್ಮಶೆಟ್ಟಿ , ಡಾಃ ಮೇಘನಾ ಮತ್ತು ಅವರ ಎದುರು ಮನೆಯಲ್ಲಿರುವ ಒಬ್ಬ ಸುಮಾ , ಇನ್ನೊಬ್ಬರು ಆಶಾ ಮತ್ತು ಕೃಷ್ಣಪ್ಪ ಎಂಬುವವರು ಗೊತ್ತು. ನಾನು ಆರೋಪಿಗಳ ಮನೆಯಲ್ಲಿದ್ದಾಗ ಅವರ ಮನೆಯ ಮೇಲಿನ ಒಂದು ಮನೆಯಲ್ಲಿ ಸೇಂಟ್ ಮೆರೀಸ್ ಸಂಸ್ಥೆಗೆ ಬಿಟ್ಟುಕೊಟ್ಟಿದ್ದರು ಇನ್ನೊಂದು ಮನೆಯಲ್ಲಿ ಯಾರೋ ಬಾಡಿಗೆಗೆ ಇದ್ದರು ಅವರ ಹೆಸರು ನನಗೆ ನೆನಪಿಲ್ಲ. ನಾನು ಹೇಳಿದ ತಿಮ್ಮಶೆಟ್ಟಿ , ಡಾಃ ಮೇಘನಾ,

ಸುಮಾ , ಆಶಾ ಮತ್ತು ಕೃಷ್ಣಪ್ಪ ಇವರ ಜೊತೆ ನನ್ನ ಸಂಬಂಧ ಚೆನ್ನಾಗಿತ್ತೋ ಅಥವಾ ಹಳಸಿ ಹೋಗಿತ್ತೋ ಎಂದರೆ ಸಾಕ್ಷಿಯು ಅವರ ಜೊತೆ ತನ್ನ ಸಂಬಂಧ ಕ್ಯಾಜ್ಯುಲ್ ಆಗಿತ್ತು ಎಂದು ಸಾಕ್ಷಿ ಹೇಳುತ್ತಾರೆ. ನಾನು ಆರೋಪಿಗಳ ಮನೆಯಲ್ಲಿದ್ದಾಗ ಈ ಮೇಲೆ ಹೇಳಿದ ಘಟನೆ ಬಗ್ಗೆ ಅಕ್ಕಪಕ್ಕದ ಮನೆಯವರಿಗೆ ಗೊತ್ತಿತ್ತಾ ಎಂದರೆ ಘಟನೆಯಾದ 2 ತಿಂಗಳಾದ ನಂತರ ಅವರಿಗೆ ಗೊತ್ತಾಗಿದೆ ಎಂದು ಹೇಳುತ್ತಾರೆ. ಮತ್ತೆ ಸಾಕ್ಷಿ ಮುಂದುವರೆದು ಪ್ರಕರಣ ದಾಖಲಾದ ನಂತರ ಆರೋಪಿಗಳು ಜಾಮೀನು ಸಿಗುವವರೆಗೆ ತಲೆ ಮರೆಸಿಕೊಂಡು ಹೋಗಿದ್ದು, ಆ ಸಮಯದಲ್ಲಿ ಅಕ್ಕಪಕ್ಕದ ಮನೆಯವರಿಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ನನಗೆ ಗಂಡನ ಮನೆಯಲ್ಲಿ ತೊಂದರೆಯಾಗುತ್ತಿದ್ದ ಬಗ್ಗೆ ನಾನು ಅಕ್ಕಪಕ್ಕದವರ ಮನೆಯವರ ಜೊತೆಗಾಗಲೀ ಅಥವಾ ಲಕ್ಷ್ಮೀಶನಗರದ ಯಾವುದೇ ಸಾರ್ವಜನಿಕರಿಗಾಗಲೀ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೇಳಿರುತ್ತೇನೆ ಎಂದು ಹೇಳುತ್ತಾರೆ. ಈ ಕುರಿತಂತೆ ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಾಗಲೀ ಅಥವಾ ದೂರಿನಲ್ಲಾಗಲೀ ನಮೂದಿಸಿರುವುದಿಲ್ಲ. ನನ್ನ ಅಕ್ಕನಿಗೆ ಇನ್ನೂ ಮದುವೆಯಾಗಿಲ್ಲ ಎಂದರೆ ಸರಿ. ನನ್ನ ಅಕ್ಕ ನಮ್ಮ ಜೊತೆ ಯಾವುದೇ ಸಂಬಂಧ ಇಟ್ಟುಕೊಂಡಿಲ್ಲ ಎಂದರೆ ಸಾಕ್ಷಿಯು ನಮ್ಮ ಜೊತೆಯಲ್ಲಿಯೇ ಇರುತ್ತಾಳೆ ಎಂದು ಹೇಳುತ್ತಾರೆ. ನನ್ನ ಮದುವೆಗಾಗಲೀ ಅಥವಾ ನನ್ನ ತಂಗಿಯರ ಮದುವೆಗಾಗಲೀ ನನ್ನ ಅಕ್ಕ ಬಂದಿರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂಗಿಯರ ಮದುವೆ ಬಂದಿದ್ದಳು ಎಂದು ಹೇಳುತ್ತಾರೆ.

28. ನಾವು ನಮ್ಮ ತಂದೆ ತಾಯಿಗೆ 4 ಜನ ಹೆಣ್ಣು ಮಕ್ಕಳು ಇದ್ದುದರಿಂದ ನಾವೆಲ್ಲರೂ ನಮ್ಮ ತಾಯಿಯ ಮಾತನ್ನು ಕೇಳಿ ಬೆಳೆದಿರುತ್ತೇವೆ ಎಂದರೆ ಸಾಕ್ಷಿಯು ನಮ್ಮ ತಂದೆ ತಾಯಿ ಇಬ್ಬರನ್ನೂ ಗೌರವಿಸುತ್ತೇವೆ ಮತ್ತು ಅವರಿಬ್ಬರ ಮಾತು ಬೆಳೆದಿರುತ್ತೇವೆ ಎಂದು ಹೇಳುತ್ತಾರೆ. ನಾವು ಹೆಣ್ಣು ಮಕ್ಕಳೆಲ್ಲರೂ ಅತ್ಯಂತ

ಸ್ವತಂತ್ರವಾಗಿ ಬೆಳೆದಿರುತ್ತೇವೆ ಎಂದರೆ ಸರಿಯಲ್ಲ ಆ ಕಾರಣಕ್ಕಾಗಿಯೇ ನಮ್ಮ ಇಬ್ಬರು ತಂಗಿಯರು , ಅಕ್ಕಂದಿರನ್ನೇ ಮರೆತು ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಕಾಲೇಜಿನಲ್ಲಿದ್ದಾಗ ಹೆಚ್ಚು ಸ್ವತಂತ್ರವಾಗಿದ್ದು, ಆ ಕಾರಣಕ್ಕಾಗಿಯೇ ನಮ್ಮ ತಂದೆ ತಾಯಿ ಮುಂದೆ ಯಾವುದೇ ಅನಾಹುತ ಆಗಬಾರದು ಎನ್ನುವ ಕಾರಣಕ್ಕಾಗಿ ಆರೋಪಿಗಳಿಗೆ ಸುಳ್ಳು ಮಾಹಿತಿ ನೀಡಿ ನನ್ನನ್ನು 1 ನೇ ಆರೋಪಿಗೆ ಆತುರಾತುರವಾಗಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಕ್ಕನು ಈ ಎಲ್ಲಾ ಘಟನೆಗಳನ್ನು ನೋಡಿ ಜಿಗುಪ್ಸೆ ಗೊಂಡು ಅವಳು ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ ನನ್ನ ಮಗನ ತಂದೆ ಯಾರು ಎಂದು ಹೇಳಲು ನಾನು ತಯಾರಾಗಿಲ್ಲ ಆದ್ದರಿಂದಲೇ ನಾನು 1 ನೇ ಆರೋಪಿಗೆ ನನ್ನ ಮಗುವಿನ ಡಿಎನ್ಎ ಟೆಸ್ಟ್ ಮಾಡಿಸು ಎಂದು ನಾನು 1 ನೇ ಆರೋಪಿಗೆ ಮೆಸೇಜ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನನ್ನ ಮಗುವಿನ ತಂದೆ 1 ನೇ ಆರೋಪಿಯಾಗಿರುತ್ತಾನೆ ಎನ್ನುವ ಬಗ್ಗೆ ನನಗೆ ಇನ್ನೂ ಅನುಮಾನವಿರುತ್ತದೆ ಎಂದರೆ ಸರಿಯಲ್ಲ. 4 ನೇ ಆರೋಪಿ ಶೀಲಾ ಇವರು ಶಿವಮೊಗ್ಗದ ವಿನೋಬಾ ನಗರದಲ್ಲಿ ವಾಸವಿರುತ್ತಾರೆ. 4 ನೇ ಆರೋಪಿ ನನ್ನ ಮದುವೆಯಾದ ಹೊಸದರಲ್ಲಿ ನನಗೆ ಫೋನ್ ಮಾಡಿ ಮಾತನಾಡಿರುತ್ತಾರೆ. ನಂತರ ಇನ್ನೊಮ್ಮೆ ಫೋನ್ ಮಾಡಿ ನನಗೆ ಬೆದರಿಕೆ ಹಾಕಿರುತ್ತಾರೆ. ಬೆದರಿಕೆ ಹಾಕಿದ ದಿನಾಂಕ ಮತ್ತು ಯಾವ ಫೋನ್ ನಂಬರ್ ನಿಂದ ಯಾವ ನಂಬರ್ ಗೆ ಬೆದರಿಕೆ ಹಾಕಿರುತ್ತಾರೆ ನನಗೆ ನೆನಪಿಲ್ಲ. 4 ನೇ ಆರೋಪಿ ನನಗೆ ಫೋನಿನಲ್ಲಿ ಬೆದರಿಕೆ ಹಾಕಿರುವ ವಿಚಾರವನ್ನು ನಾನು ಕೊಟ್ಟ ಯಾವುದೇ ದೂರಿನಲ್ಲಿ ಹೇಳಿರುವುದಿಲ್ಲ ಆದರೆ ಬಾಯಿ ಮಾತಿನ ಮೂಲಕ ಹೇಳಿರುತ್ತೇನೆ. ಸದರಿ ವಿಷಯವನ್ನು ನಾನು ಬೆಂಗಳೂರಿನಲ್ಲಿ ದಾಖಲಾದ ದೂರಿನಲ್ಲಿ ಹೇಳಿರುತ್ತೇನೆ.

ಆ ರೀತಿ 4 ನೇ ಆರೋಪಿ ನನಗೆ ಬೆದರಿಕೆ ಹಾಕಿಲ್ಲ ಎಂದು ನಾನು ಎಲ್ಲಿಯೂ ಹೇಳಿಲ್ಲ ಮತ್ತು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

29. ನನ್ನ ಅತ್ತೆ ಮತ್ತು ಮಾವ ಯಾವ ಮೊಬೈಲ್ ಗಳನ್ನು ಉಪಯೋಗಿಸುತ್ತಿದ್ದರು ನನಗೆ ಗೊತ್ತಿಲ್ಲ ಆದರೆ ಅವರು ಆಂಡ್ರಾಯ್ಡ್ ಫೋನುಗಳನ್ನು ಉಪಯೋಗಿಸುತ್ತಿದ್ದರು. ನಾನು ನನ್ನ ಗಂಡನ ಮನೆಯಲ್ಲಿದ್ದಾಗ ಏನಾದರೂ ಜೋರು ಶಬ್ದವಾದರೆ ಅಕ್ಕಪಕ್ಕದ ಮನೆಯವರಿಗೆ ಕೇಳಿಸುತ್ತಿತ್ತಾ ಎಂದರೆ ಕೇಳಿಸುತ್ತಿರಲಿಲ್ಲ ಎಂದು ಹೇಳುತ್ತಾರೆ. ಚಿಕ್ಕಮಗಳೂರಿನ ಲಕ್ಷ್ಮೀಶ ನಗರ ಇದು ಅಭಿವೃದ್ಧಿ ಹೊಂದುತ್ತಿರುವ ನಗರ. ಸದರಿ ಪ್ರದೇಶದಲ್ಲಿ ಎಲ್ಲಾ ಮನೆಯವರು ತಮ್ಮ ತಮ್ಮ ಮನೆಯ ಬಾಗಿಲುಗಳನ್ನು ಹಾಕಿಕೊಂಡು ಇರುತ್ತಾರೆ ಎಂದರೆ ಸಾಕ್ಷಿಯು ಕೆಲವರು ಹಾಕಿಕೊಳ್ಳುತ್ತಾರೆ ಕೆಲವರು ಹಾಕಿಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಅತ್ತೆ ಮಾವ ಇವರು ಯಾವಾಗಲೂ ತಮ್ಮ ಮನೆಯ ಬಾಗಿಲನ್ನು ಮುಚ್ಚಿಕೊಂಡೇ ಇರುತ್ತಿದ್ದರು ಎಂದರೆ ಸಾಕ್ಷಿಯು ಬಾಗಿಲಿಗೆ ಚಿಲಕ ಹಾಕುತ್ತಿರಲಿಲ್ಲ ಬರೀ ಮುಚ್ಚುತ್ತಿದ್ದರು ಎಂದು ಹೇಳುತ್ತಾರೆ.

30. ನನ್ನ ಗಂಡನ ಮನೆಯ ಅಕ್ಕಪಕ್ಕದ ಮನೆಯ ಹತ್ತಿರ ಯಾವುದಾದರೂ ಸಿಸಿ ಕ್ಯಾಮೆರಾ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಈ ಘಟನೆ ಸಂಬಂಧಪಟ್ಟಂತೆ ನಾನು ಚಿಕ್ಕಮಗಳೂರಿನ ಎಂಜಿ ಮಲ್ಲೇಗೌಡ ಸರ್ಕಾರಿ ಆಸ್ಪತ್ರೆಯಲ್ಲಿ 2 ದಿನ ಅಂದರೆ ದಿನಾಂಕಃ27-09-2017 ಮತ್ತು 28-09-2017 ರಂದು ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ದಿನಾಂಕಃ 27-09-2017 ರಂದು ಆಸ್ಪತ್ರೆಗೆ ದಾಖಲಾದಾಗ ನಮ್ಮ ಕುಟುಂಬದವರು ಆಸ್ಪತ್ರೆಗೆ ಬಂದಿದ್ದರು. ನನ್ನ ತಂದೆ ಪೊಲೀಸ್ ಅಧಿಕಾರಿ ಇದ್ದುದರಿಂದ ಮತ್ತು ನಾನು ಅದೇ ಪರಿಸರದಲ್ಲಿ ಬೆಳೆದು ಬಂದಿದ್ದರಿಂದ ನನಗೆ

ಯಾವ ರೀತಿ ದೂರನ್ನು ನೀಡಬೇಕು ಎಂದು ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ದಾಖಲಾದಾಗ ವೈಧ್ಯರು ನನಗೆ ಚಿಕಿತ್ಸೆ ನೀಡಿರುತ್ತಾರೆ. ಚಿಕ್ಕಮಗಳೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಎಂಎಲ್‌ಸಿ ವಾರ್ಡ್ ಪಕ್ಕ ಪೊಲೀಸ್ ಔಟ್ ಪೋಸ್ಟ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಚಿಕಿತ್ಸೆಗೆ ದಾಖಲಾದ ಸಮಯದಲ್ಲಿ ವೈಧ್ಯರ ಮುಖಾಂತರ ಪೊಲೀಸರಿಗೆ ವಿಷಯ ತಿಳಿಸಿದ ಬಗ್ಗೆ ನನಗೆ ಗೊತ್ತಿಲ್ಲ ವೈಧ್ಯರು ಹೇಳಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ನಾನು ಆಸಕ್ಪತ್ರೆಗೆ ದಾಖಲಾದ ಬಾಬ್ತು ನೀಡಿದ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಮೇಲೆ ಹಲ್ಲೆ ಆಗಿರುವ ಹಿನ್ನೆಲೆಯನ್ನು ನಮೂದಿಸಿರುತ್ತಾರೆ. ಆದರೆ ಯಾರಿಂದ ಹಲ್ಲೆ ಆಗಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಆ ದಿನ ವೈಧ್ಯರ ಮುಂದೆ ಆರೋಪಿಗಳು ಹಲ್ಲೆ ಮಾಡಿರುವ ವಿಷಯವನ್ನು ಹೇಳಿರುತ್ತೇನೆ. ಆ ಸಮಯದಲ್ಲಿ ನಾನು ಸೆಮಿ ಕಾನ್ಸಿಯಸ್ ಆಗಿ ಇದ್ದೆನು. ಆ ಸಮಯದಲ್ಲಿ ನಾನು ಕಾನ್ಸಿಯಸ್ ಆಗಿ ಮತ್ತು ಸ್ಟೇಬಲ್ ಆಗಿ ಇದ್ದೆ ಎಂದು ವೈಧ್ಯರು ಹೇಳಿರುತ್ತಾರೆ ಎಂದರೆ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ. ನಾನು ವೈಧ್ಯರಿಗೆ ಹೇಳಿದಂತ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ನನಗೆ ಮೇಲ್ನೋಟಕ್ಕೆ ಎದ್ದು ಕಾಣುವಂತಹ ಗಾಯಗಳಾಗಿದ್ದವು.

31. ನಿಪಿ.9, 10, 11 ಪೋಟೋ ಗಳನ್ನು ಪೊಲೀಸರು ಆಸ್ಪತ್ರೆಗೆ ಬಂದಾಗ ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ಯಾವ ಪೊಲೀಸ್ ತೆಗೆದಿರುತ್ತಾರೆ ಮತ್ತು ಯಾವ ಸಾಧನದಿಂದ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಪೋಟೋ ಗಳನ್ನು ಹೇಗೆ ಮತ್ತು ಯಾವ ರೀತಿ ಪ್ರಿಂಟ್ ಮಾಡಿ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಆರೋಪಿ ಪರ ವಕೀಲರು ಒಂದು ಪೋಟೋ ವನ್ನು ತೋರಿಸಿದ್ದು ,

ಅದನ್ನು ಬೆಂಗಳೂರಿನ ಪೊಲೀಸ್ ಠಾಣೆ ಯಲ್ಲಿ ದೂರು ನೀಡುವಾಗ ಕೊಟ್ಟ ಫೋಟೋ ಎಂದರೆ ಸಾಕ್ಷಿಯು ಅಲ್ಲ ಎಂದು ಹೇಳುತ್ತಾರೆ. ನಿಪಿ.9 ರಿಂದ 11 ಫೋಟೋ ಗಳನ್ನು ತೆಗೆದ ಸಮಯದಲ್ಲೇ ಸದರಿ ಫೋಟೋ ವನ್ನು ಸಹ ತೆಗೆದಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ಘಟನೆಯಲ್ಲಿ ಮೊದಲಿಗೆ ನನಗೆ ಆರೋಪಿಗಳು ಬರೆ ಹಾಕಿರುತ್ತಾರೆ ನಂತರ ವೈರ್ ನಿಂದ ಕುತ್ತಿಗೆಗೆ ಹಾಕಿರುತ್ತಾರೆ. ಸದರಿ ಘಟನೆಯು ಎಷ್ಟು ನಿಮಿಷದವರೆಗೆ ನಡೆಯಿತು ಎಂದರೆ ಘಟನೆಯು ಆ ದಿನ ಮಧ್ಯಾಹ್ನ 12 ಗಂಟೆಯಿಂದ 12.30 ಗಂಟೆಯ ಅವಧಿಯೊಳಗೆ ನಡೆದಿರುತ್ತದೆ. ಆ ಅವಧಿಯೊಳಗೆ ನನ್ನನ್ನು ನಾನು ಆರೋಪಿಗಳ ಕೈಯಿಂದ ಬಿಡಿಸಿಕೊಳ್ಳಲು ಪ್ರಯತ್ನ ಪಟ್ಟೆ ಆದರೆ ಆಗಲಿಲ್ಲ. ನಾನು ಆ ರೀತಿ ಪ್ರಯತ್ನ ಪಟ್ಟ ಅವಧಿ ಕನಿಷ್ಟ 10 ನಿಮಿಷ ಇರಬಹುದಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ಘಟನೆಯಲ್ಲಿ ಆರೋಪಿಗಳು ನನ್ನ ಕೈಗಳನ್ನು ಹಿಡಿದು ಹಲ್ಲೆ ಮಾಡುವ ಸಮಯದಲ್ಲಿ ನಾನು ಬಿಡಿಸಿಕೊಳ್ಳುವ ಸಲುವಾಗಿ ಪ್ರಯತ್ನ ಪಟ್ಟಾಗ ಯಾವುದಾದರೂ ಫರ್ನೀಚರ್ ಗಳಿಗಾಗಲೀ ಅಥವಾ ನನ್ನ ಕೈ ಗಳ ಮೇಲೆ ಸ್ಕ್ರಾಚ್ ಗಳಾಗಲೀ ಅಥವಾ ಯಾವುದೇ ಗುರುತುಗಳಾಗಲೀ ಆಗಿದ್ದವಾ ಎಂದರೆ ಸಾಕ್ಷಿಯು ನನ್ನ ಬೆನ್ನಿಗೆ ಗುದ್ದಿರುತ್ತಾರೆ ಮತ್ತು ನನ್ನ ತಲೆಗೂದಲನ್ನು ಬಲವಾಗಿ ಎಳೆದಿರುತ್ತಾರೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ಆರೋಪಿಗಳು ನನ್ನ ಕೈಗಳನ್ನು ಹಿಡಿದಾಗ ಕೈಗಳ ಮೇಲೆ ಗುರುತು ಆಗಿತ್ತು. ಆಸ್ಪತ್ರೆಯಲ್ಲಿ ವೈಧ್ಯರು ನನ್ನನ್ನು ಕೂಲಂಕುಷವಾಗಿ ಪರೀಕ್ಷೆ ಮಾಡಿರುತ್ತಾರೆ. ಆ ಸಮಯದಲ್ಲಿ ವೈಧ್ಯರಿಗೆ ಆರೋಪಿಗಳು ಘಟನೆಯ ಸಮಯದಲ್ಲಿ ನನ್ನ ಬೆನ್ನಿಗೆ ಗುದ್ದಿದ ವಿಷಯ , ಕೂದಲನ್ನು ಹಿಡಿದು ಎಳೆದ ವಿಷಯ ಮತ್ತು ನನ್ನ ಕೈಗಳನ್ನು ಅವರು ಬಲವಾಗಿ ಹಿಡಿದಿದ್ದರಿಂದ ಆದ ಗುರುತುಗಳ ಬಗ್ಗೆ ಹೇಳಿರುತ್ತೇನೆ.

32. ಈ ಮೇಲಿನ ವಿಷಯಗಳನ್ನು ನಾನು ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಈ ಹಿಂದೆ ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಮದುವೆಯಾಗಲೂ ನನಗೆ ಎಳ್ಳಷ್ಟು ಇಷ್ಟ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಒಬ್ಬನೇ ಮಗ ಮತ್ತು ಆಸ್ತಿವಂತರು ಎಂದು ನನ್ನ ತಾಯಿ ಹೇಳಿದ್ದರಿಂದ ನಾನು ಮದುವೆಯಾಗಿರುತ್ತೇನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ನಾನು ಗಂಡನ ಮನೆಯಲ್ಲಿ ಹೆಂಡತಿಯ ಧರ್ಮವನ್ನು ಪಾಲಿಸದೇ ಅವರಿಂದ ಎಷ್ಟು ಸಾಧ್ಯವಾಗುತ್ತದೋ ಅಷ್ಟು ಹಣವನ್ನು ನಾನು ಮತ್ತು ನಮ್ಮ ಮನೆಯವರು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳು ನಾವು ಕೇಳಿದಂತೆ ಹಣವನ್ನು ಕೊಡದೇ ಇದ್ದಾಗ ನನ್ನ ತಂದೆ ಪೊಲೀಸ್ ಹುದ್ದೆಯ ಪ್ರಭಾವದಿಂದ ಮತ್ತು ನನ್ನ ತಾಯಿಯ ಬುದ್ದಿವಂತಿಕೆಯಿಂದ ಆರೋಪಿಗಳ ಮೇಲೆ ಸುಳ್ಳು ದೂರನ್ನು ಕೊಡುವುದು, ರಾಜೀ ಮಾಡಿಸಿಕೊಳ್ಳುವುದು ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಮತ್ತೆ ಮತ್ತೆ ಇದೇ ಕಾರಣದಿಂದ ಆರೋಪಿಗಳು ನಮಗೆ ದುಡ್ಡು ಕೊಡುವುದಿಲ್ಲ ಎಂದು ಹೇಳಿದಾಗ ನಾವು ಪ್ರಸ್ತುತ ಪ್ರಕರಣವನ್ನು ಆರೋಪಿಗಳ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸುಳ್ಳು, ಈ ಪ್ರಕರಣದ ದೂರು ಸಲ್ಲಿಕೆಯಾದ ನಂತರವೂ ನಾನು 1 ನೇ ಆರೋಪಿಯೊಂದಿಗೆ 2 ರಿಂದ ಎರಡೂಕಾಲು ವರ್ಷ ಸಂಸಾರ ಮಾಡಿರುತ್ತೇನೆ ಎಂದರೆ ಸತತವಾಗಿ ನಾನು 1 ನೇ ಆರೋಪಿ ಜೊತೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆ ಅವಧಿಯಲ್ಲೂ ಕೂಡಾ ಆರೋಪಿಗಳು ನನಗೆ ಬಂಗಾರ ಮತ್ತು ಹಣ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ನಮಗೆ ಕೊಟ್ಟಿರುವ ಹಣ ಮತ್ತು ಬಂಗಾರ ಸಾಲುತ್ತಿಲ್ಲ ಎಂದು ಅವರ ಇಡೀ ಆಸ್ತಿಯನ್ನು ಪಡೆದುಕೊಳ್ಳುವ ದುರುದ್ದೇಶದಿಂದ ಅವರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಇವತ್ತಿಗೂ ಕೂಡಾ 1 ನೇ

ಆರೋಪಿಯು ನನ್ನನ್ನು ತನ್ನ ಮನೆಗೆ ಕರೆದರೆ ಹೋಗಲಿಕ್ಕೆ ಸಿದ್ಧವಿದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ಸದರಿ ಸರೋಜಾ ಎಂಬುವವರು ಆರೋಪಿಗಳಿಗೆ ನನ್ನ ಮೂಲಕ ಸಂಬಂಧ ಎಂದರೆ ಸರಿ. ರಾಘವೇಂದ್ರ , ಧರ್ಮೇಗೌಡ , ಮರೀಗೌಡ , ಲಕ್ಷ್ಮಣ ಗೌಡ ಈ ಸಾಕ್ಷಿದಾರರು ನಮ್ಮ ತಾಯಿಯ ಕಡೆಯಿಂದ ಸಂಬಂಧಿಕರು ಎಂದರೆ ಸರಿಯಲ್ಲ. ಮೂರುಮನೆಹಳ್ಳಿಯಲ್ಲಿ ನಮ್ಮ ಆಸ್ತಿ ಇರುತ್ತದೆ ಎಂದರೆ ಸರಿ. ಚೆನ್ನಾಪುರದ ರಸ್ತೆ ಮತ್ತು ಕಣದಾಳು ರಸ್ತೆಗಳು ಅಕ್ಕಪಕ್ಕದ ರಸ್ತೆಗಳು ಎಂದರೆ ಸರಿಯಲ್ಲ.

33. ನನ್ನ ತಾಯಿಯ ತವರು ಮನೆ ಕೋಟೆ ಕಣದಾಳು ರಸ್ತೆ . ಕೋಟೆ ಎಂಬುದು ಚಿಕ್ಕಮಗಳೂರು ನಗರದಲ್ಲಿರುವ ಒಂದು ಸಣ್ಣ ಬಡಾವಣೆ ಎಂದರೆ ಸಾಕ್ಷಿಯು ಅದು ದೊಡ್ಡ ಬಡಾವಣೆ ಎಂದು ಹೇಳುತ್ತಾರೆ. ನಾನು ಹೇಳಿದ ರೀತಿ ಯಾವುದೇ ಘಟನೆಗಳು ನಡೆದೇ ಇಲ್ಲ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯನ್ನು ಮದುವೆಯಾಗಿರುವ ಉದ್ದೇಶ ಅವರಿಂದ ಹಣ ಕಿತ್ತುಕೊಳ್ಳಲಿಕ್ಕೆ ಮತ್ತು ಪ್ರಸ್ತುತ ಪ್ರಕರಣವನ್ನು ದಾಖಲಿಸಿದ್ದು, ಅವರಿಂದ ಹಣ ಪಡೆದುಕೊಳ್ಳಲಿಕ್ಕೆ ಎಂದರೆ ಸರಿಯಲ್ಲ. ನನ್ನ ಒಬ್ಬ ತಂಗಿ ಗಂಡನ ಮನೆಯನ್ನು ಬಿಟ್ಟು ಬಂದು ನಮ್ಮ ಜೊತೆಯಲ್ಲಿ ಇರುತ್ತಿದ್ದಾಳೆ ಎಂದರೆ ಸರಿಯಲ್ಲ. ನನ್ನ ತಂಗಿಯ ಗಂಡನ ಮನೆಯವರಿಂದ ಹಣ ಪಡೆದುಕೊಂಡಿದ್ದು , ಅದರಿಂದ ಪ್ರೇರಿತಗೊಂಡು ಆರೋಪಿಗಳಿಂದ ಹಣ ಪಡೆಯಲು ಪ್ರಸ್ತುತ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ ಮತ್ತು ಮು.ಮಾ.1 ಮತ್ತು 2 ಮುದ್ದೆಮಾಲುಗಳಿಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ

ಎಂದರೆ ಸರಿಯಲ್ಲ. ಸದರಿ ಮುದ್ದೆಮಾಲುಗಳು ನಮ್ಮ ಮನೆಯ ವಸ್ತುಗಳು ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ